**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ

وَبَارِكْ لَنَا فِىْ عُمْرِهٖ وَاَمْرِهٖ

بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 16

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**30 ಏಪ್ರಿಲ್ 2020, 30 ಶಹಾದತ್ 1399 ಹಿಜರಿ ಶಮ್‌ಸಿ, 06 ರಮಝಾನ್ 1441 ಹಿಜರಿ ಖಮರಿ.**


**ಅಲ್ಲಾಹನ ಉಪದೇಶ**

رَبَّنَا فَاغْفِرْ لَنَا ذُنُوْبَنَا

وَكَفِّرْ عَنَّا سَيِّاٰتِنَا

وَتَوَفَّنَا مَعَ الْاَبْرَارِ۝

*(ಆಲಿ ಇಮ್ರಾನ್ 194)*

ಅಂದರೆ: ನಮ್ಮ ಪ್ರಭೂ, ನಮ್ಮ ಪಾಪಗಳನ್ನು ನಮಗೆ ಕ್ಷಮಿಸಿಕೊಡು; ನಮ್ಮ ಕೆಡುಕುಗಳನ್ನು ನಮ್ಮಿಂದ ದೂರಮಾಡು, ಹಾಗೂ ಸಜ್ಜನರ ಜೊತೆಯಲ್ಲಿ (ಸಜ್ಜನರನ್ನಾಗಿ ಮಾಡಿ) ನಮ್ಮನ್ನು ಮರಣಪಡಿಸು.

**ನನ್ನೊಡನೆ ತಾವು ಒಂದು ಸತ್ಯವಾದ ಸಂಬಂಧ ಹೊಂದಿದ ಕಾರಣ ನಾನು ನಿಮಗೆ ಹೇಳುವುದೇನೆಂದರೆ ನೀವು ನಿಮ್ಮ ನೀತಿ, ಗುಣಗಳಲ್ಲಿ ಅದ್ವಿತೀಯ ಪರಿವರ್ತನೆ ಹೊಂದಬೇಕು. ಅದು ಇತರರಿಗೆ ಮಾರ್ಗದರ್ಶನವು ಮತ್ತು ಪುಣ್ಯಕರವೂ ಆಗಿರಬೇಕು.**

**ಮನುಷ್ಯನು ಹಲವು ಆಸೆ ಆಕಾಂಕ್ಷೆಗಳನ್ನು ಹೊಂದಿರುತ್ತಾನೆ. ಅಗೋಚರ ವಿಧಿಯ ಜ್ಞಾನ ಯಾರಿಗಿದೆ.**

**ಆಸೆ ಆಕಾಂಕ್ಷೆಗಳ ಮೇರೆಗೆ ಎಂದೂ ಜೀವನ ಸಾಗದು. ಆಸೆ ಆಕಾಂಕ್ಷೆಗಳ ಸರಣಿ ಬೇರೆಯಾಗಿದೆ ಮತ್ತು ವಿಧಿಯ ಆಟ ಬೇರೆಯಾಗಿದೆ. ಅದುವೇ ಸತ್ಯವಾಗಿದೆ.**

**ನೆನಪಿಡಿರಿ. ಅಲ್ಲಾಹನ ಬಳಿ ಮನುಷ್ಯನ ದಿನಚರಿ ಇದೆ. ಅದರಲ್ಲಿ ಏನೇನು ಬರೆದಿದೆ ಎಂದು ಅವನಿಗೆ ಗೊತ್ತು. ಆದುದರಿಂದ ಮನಸ್ಸನ್ನು ಜಾಗೃತಗೊಳಿಸುವತ್ತ ಗಮನ ಹರಿಸಬೇಕಾಗುತ್ತದೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

## ನಮಾಝ್‌ಗಳ ನಿಗಧಿತ ವೇಳೆಗಳು ಆಧ್ಯಾತ್ಮಿಕ ಸ್ಥಿತಿಗಳ ಒಂದು ಪ್ರತಿಬಿಂಬಿತ ಚಿತ್ರವಾಗಿದೆ.

ಇದನ್ನೂ ನೆನಪಿಡಿರಿ ಈ ಐದು ಹೊತ್ತಿನ ನಮಾಝ್‌ಗಳಿಗೋಸ್ಕರ ನಿಗದಿಗೊಳಿಸಿದ ವೇಳೆಯು ಯಾವುದೇ ರೀತಿಯ ಬಲವಂತ ಅಥವಾ ತಲೆದಂಡ ರೀತಿಯದ್ದಾಗಲಿ ಅಲ್ಲ. ಬದಲು ಯೋಚಿಸಿ ನೋಡಿದರೆ ಅವು ವಾಸ್ತವದಲ್ಲಿ ಆಧ್ಯಾತ್ಮಿಕ ಸ್ಥಿತಿಗಳ ಒಂದು ಪ್ರತಿಬಿಂಬಿತ ಚಿತ್ರವಾಗಿದೆ. ಅಲ್ಲಾಹನು ಇದರ ಬಗ್ಗೆ ನುಡಿದನು. **ಅಖಿಮಿಸ್ಸಲಾತ ಲಿದುಲೂಕಿಶ್ಶಮ್‌ಸಿ (ಬನಿಇಸ್ರಾಯೀಲ್: 79)** ಅಂದರೆ ನಮಾಝನ್ನು ಸೂರ್ಯ ಇಳಿಮುಖವಾಗುವ ಸಮಯದಿಂದ ಅನುಸರಿಸಿರಿ. ಇದೀಗ ನೋಡಿರಿ. ಅಲ್ಲಾಹನು ಇಲ್ಲಿ ನಮಾಝ್ ಅನುಷ್ಠಿಸುವ ಸಮಯ ಸೂರ್ಯ ಇಳಿಮುಖವಾಗುವದಿಂದ ಪರಿಗಣಿಸಿದ್ದಾನೆ. **'ದುಲೂಕ್'** ಅರ್ಥ ವ್ಯಾಖ್ಯಾನದಲ್ಲಿ ಭಿನ್ನತೆಗಳಿವೆ. ಆದರೆ ಮಧ್ಯಾಹ್ನ ಇಳಿಮುಖವಾಗುವ ಸಮಯದ ಹೆಸರು **ದುಲೂಕ್** ಎಂದಾಗಿದೆ. ಈಗ **ದುಲೂಕ್**ನಿಂದ ಹಿಡಿದು ಐದು ನಮಾಝುಗಳನ್ನು ಇಟ್ಟುಕೊಳ್ಳಿರಿ. ಇದರಲ್ಲಿ ಇರುವ ಮರ್ಮವೇನು? ದೈವಿಕ ವಿಧಿ ನಿಯಮವು ನಮಗೆ ತೋರಿಸುವುದೇನೆಂದರೆ ಆಧ್ಯಾತ್ಮಿಕ ವಿಷಯ ಮತ್ತು ನಮ್ರತೆಯ ದರ್ಜೆಗಳು ದುಲೂಕ್‌ನಿಂದಲೇ ಆರಂಭಗೊಳ್ಳುತ್ತವೆ ಮತ್ತು ಇದೇ ಅವಸ್ಥೆಗಳು ಎದುರಾಗುತ್ತವೆ. ಆದುದರಿಂದ ಈ ಸಹಜವಾದ ನಮಾಝ್ ಸಹ ಅದೇ ಹೊತ್ತಿನಿಂದ ಆರಂಭಗೊಳ್ಳುತ್ತಿದೆ. ದುಃಖ ದುಮ್ಮಾನಗಳು ಗೋಚರಿಸಿದಾಗ, ಮನುಷ್ಯನ ಮೇಲೆ ಯಾವುದೇ ಆಪತ್ತು ಅಥವಾ ಕಷ್ಟಗಳು ಬಂದೆರಗಿದಾಗ ಎಷ್ಟೊಂದು ವಿನಯ ಮತ್ತು ನಮ್ರತೆ ತೋರಿಸುತ್ತಾನೆ. ಅದೇ ರೀತಿ ಯಾವುದೇ ಭೂಕಂಪಗಳು ಸಂಭವಿಸಿದರೆ ನೀವು ತಿಳಿಯಬಹುದು. ನಮ್ಮಲ್ಲಿ ಯಾವ ರೀತಿ ನಮ್ರ ಮತ್ತು ವಿನಯಭಾವನೆ ಜನ್ಮತಾಳುತ್ತವೆ ಎಂದು. ಅದೇ ರೀತಿ ಯೋಚಿಸಿ ಉದಾಹರಣೆಗೆ, ಯಾವುದೇ ವ್ಯಕ್ತಿಯ ಮೇಲೆ ಆರೋಪ ಬಂದು ಅವನಿಗೆ ಸಮನ್ಸ್ ಅಥವಾ ವಾರಂಟ್ ಬಂದ ಮೇಲೆ ಅವನಿಗೆ ತಿಳಿಯವುದು ಅದು ಆಸ್ತಿಗೆ ಸಂಬಂಧಿಸಿದ ಮೊಕದ್ದಮೆಯೋ ಅಥವಾ ಇತರ ವಿಷಯಕ್ಕೆ ಸಂಬಂಧಿಸಿದ್ದಾಗಿದೆಯೇ ಎಂದು. ವಾರಂಟಿನ ಬಗ್ಗೆ ಅಧ್ಯಯನ ಮಾಡಿದ ನಂತರ ಅವನ ಸ್ಥಿತಿ ಮಧ್ಯಾಹ್ನದ ಸೂರ್ಯ ಇಳಿಮುಖವಾದ ರೀತಿಯಲ್ಲಿ ಪ್ರಾರಂಭವಾಗುತ್ತದೆ. ಏಕೆಂದರೆ ವಾರಂಟ್ ಅಥವಾ ಸಮನ್ಸ್ ಬರುವುದಕ್ಕಿಂತ ಮುಂಚೆ ಅವನಗೆ ಏನೂ ತಿಳಿದಿರಲಿಲ್ಲ. ಈಗ ಯೋಚಿಸುತ್ತಾನೆ ವಕೀಲ ಸಹಾಯಕ್ಕೆ ಬರುವನೋ ಇಲ್ಲವೋ ದೇವರೇ ಗತಿ? ಈ ರೀತಿಯ ಚಿಂತೆ ಆತಂಕಗಳಿಂದ ಇಳಿಮುಖ ಉಂಟಾಗುತ್ತದೆ. ಇದು ದುಲೂಕಿನ ಸ್ಥಿತಿಯೇ ಆಗಿದೆ. ಇದು ಮೊದಲನೆಯ ಸ್ಥಿತಿಯಾಗಿದೆ. ಅದು ಝುಹರಿನ ಸ್ಥಾನಮಾನಕ್ಕೆ ಅನುಗುಣವಾಗಿದೆ. ಅದರ ಪ್ರತಿಬಿಂಬಿತ ಸ್ಥಿತಿ ಝುಹರ್ ನಮಾಝ್ ಆಗಿದೆ. ಈಗ ಎರಡನೇ ಸ್ಥಿತಿ ಅವನ ಮೇಲೆ ಬರುವುದು. ಅವನು ನ್ಯಾಯಾಲಯದ ಮುಂದೆ ಬಂದು ನಿಂತಿದ್ದಾನೆ. ವಿರೋಧಿ ವಲಯದಿಂದ ಮತ್ತು ನ್ಯಾಯಾಲಯದಿಂದ ಪ್ರಶ್ನೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಅದೊಂದು ಗಂಭೀರ ಸ್ಥಿತಿಯಾಗಿರುತ್ತದೆ. ಈ ಸ್ಥಿತಿ ಮತ್ತು ಸಮಯವು ಅಸರ್ ನಮಾಝಿಗೆ ಅನುರೂಪವಾಗಿದೆ. ಏಕೆಂದರೆ ಅಸರ್ ರುಬ್ಬುಬುದು ಅಥವಾ ಹೀರುವುದು ಅರ್ಥ ಹೊಂದಿರುತ್ತದೆ. ಸ್ಥಿತಿ ಇನ್ನೂ ಚಿಂತಾಜನಕವಾದಾಗ ವ್ಯಕ್ತಿಗತ ಅಪರಾಧದ ಆರೋಪ ಸಿದ್ಧಗೊಳ್ಳುತ್ತದೆ. ಆಗ ನಿರಾಸೆ ಮತ್ತು ಭಯ ಇನ್ನೂ ಹೆಚ್ಚಾಗುತ್ತದೆ. ಏಕೆಂದರೆ ಈಗ ಯೋಚನೆ ಬರುವುದು ಶಿಕ್ಷೆ ಸಿಗಬಹುದೆಂದು. ಈ ಸಮಯವು ಮಗ್ರಿಬ್ ನಮಾಝಿನ ಪ್ರತಿಬಿಂಬವಾಗಿದೆ. ಮತ್ತೆ ಆದೇಶ ತಿಳಿಸಲಾಗುತ್ತದೆ. Constable ಅಥವಾ Court inspector ಗೆ ಒಪ್ಪಿಸಿದಾಗ ಅದು ಆಧ್ಯಾತ್ಮಿಕ ನೆಲೆಯಲ್ಲಿ ಇಶಾಅ ನಮಾಝಿನ ಪ್ರತಿಬಿಂಬಿತ ಚಿತ್ರವಾಗಿರುತ್ತದೆ. ಅಂತಿಮವಾಗಿ ನಮಾಝಿನ ಮುಂಜಾನೆ, ಸುಬಹ್ ಪ್ರಕಟಗೊಳ್ಳುತ್ತದೆ. **ಇನ್ನ ಮಅಲ್‌ಉಸ್‌ರಿ ಯುಸ್‌ರ (ಅಲ್‌ಇನ್‌ಶರಹ್: 07)** ಅವಸ್ಥೆ ಉಂಟಾದಾಗ ಆಧ್ಯಾತ್ಮಿಕ ಫಜರ್ ನಮಾಝಿನ ಸಮಯ ಬರುತ್ತದೆ. ಹೀಗೆ ಅದು ಫಜರ್ ನಮಾಝಿನ ಪ್ರತಿಬಿಂಬಿತ ಚಿತ್ರವಾಗಿದೆ.

ಒಟ್ಟಿನಲ್ಲಿ ಮತ್ತೆ ನಿಮ್ಮನ್ನು ಉದ್ದೇಶಿಸಿ ಹೇಳುತ್ತೇನೆ. ನನ್ನೊಂದಿಗೆ ಸಂಬಂಧ ಹೊಂದಿದ ನಿಮ್ಮಿಂದ ನಾನು ಬಯಸುವುದೇನೆಂದರೆ ನೀವು ತಮ್ಮ ನೀತಿಯಲ್ಲಿ, ಗುಣಗಳಲ್ಲಿ ಒಂದು ಅದ್ವಿತೀಯ ಪರಿವರ್ತನೆ ಹೊಂದಿಕೊಳ್ಳಬೇಕು.

*(ಪುಟ ಸಂಖೆ 04 ರಲ್ಲಿ ಮುಂದುವರಿಸಲಾಗಿದೆ)*

# ವಿಶೇಷ ಸಂದೇಶ

**ಅಲ್ಲಾಹನು ನಮಗೆ ದುಆ ಎಂಬ ಬಹಳ ದೊಡ್ಡ ಆಯುಧ ನೀಡಿದ್ದಾನೆ. ಅದರ ಮೂಲಕ ಅಲ್ಲಾಹನ ಆಶ್ರಯ ಪಡೆಯಲು ನಾವು ಪ್ರಯತ್ನಿಸಬೇಕು ಮತ್ತು ಅದರ ಬಗ್ಗೆ ಶ್ರದ್ಧೆ ಹರಿಸಬೇಕು.**

**ನಾನು ಸಮಾಲೋಚನೆ ನಡೆಸಿದ ನಂತರ ಹೀಗೆ ನಿರ್ಧರಿಸಿದೆ: ಖುತುಬಕ್ಕೆ ಬದಲಾಗಿ ನನ್ನ ಕಚೇರಿಯಿಂದಲೇ ಒಂದು ಸಂದೇಶವನ್ನು ನೀಡಿ ನಿಮ್ಮೊಂದಿಗೆ ಮಾತನಾಡುವೆನು ಎಂದು.**

**ಜಮಾಅತ್ ಸದಸ್ಯರು ತಮ್ಮ ಮನೆಗಳಲ್ಲಿಯೇ ಬಾಜಮಾಅತ್ ನಮಾಝ್ ನಿರ್ವಹಿಸಲು ಏರ್ಪಾಡು ಮಾಡಬೇಕು. ಜುಮುಅ ಸಹ ಮನೆಯ ಸದಸ್ಯರು ಸೇರಿಕೊಂಡು ನಿರ್ವಹಿಸಬೇಕು.**

**ಮಲ್‌ಫೂಝಾತ್‌ನಿಂದ, ಜಮಾಅತಿನ ಇತರ ಗ್ರಂಥಗಳಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇತರ ಗ್ರಂಥಗಳಿಂದ, ಅಲ್‌ಫಝಲ್ ಪತ್ರಿಕೆಯಿಂದ, ಅಲ್‌ಹಕಮ್ ಪತ್ರಿಕೆಯಿಂದ ಅಥವಾ ಬೇರೆ ಪುಸ್ತಕಗಳಿಂದಲೂ ಯಾವುದಾದರೂ ಉದ್ಧರಣೆಗಳನ್ನು ಓದಿ ಖುತ್‌ಬ ನೀಡಬಹುದು. ಮನೆಯಲ್ಲಿರುವ ಪ್ರಾಪ್ತ ವಯಸ್ಕನಾದ ಬಾಲಕ ಅಥವಾ ಪುರುಷ ಜುಮುಅ ಖುತ್‌ಬ ನೀಡಿ ನಮಾಝ್ ನಿರ್ವಹಿಸಬಹುದು.**

**ಮನೆಯಲ್ಲಿ ಜುಮುಅ ನಮಾಝ್ ನಿರ್ವಹಿಸಲು ಅದಕ್ಕೋಸ್ಕರ ಸಿದ್ಧತೆಗಳನ್ನು ಮಾಡುವರು. ಅವರು ಪುಸ್ತಕಗಳನ್ನು ಓದುವರು ಮತ್ತು ಜ್ಞಾನ ವೃದ್ಧಿಯಾಗುವುದು. ಈ ರೀತಿ ಸರಕಾರದ ನಿರ್ಬಂಧ ಪ್ರಕಾರ ಮನೆಯಲ್ಲಿ ಕುಳಿತುಕೊಳ್ಳುವುದು ಸಹ ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಲಾಭಕರವಾಗುವುದು. ಜ್ಞಾನವರ್ಧನೆಗೆ ಕಾರಣವಾಗುವುದು.**

**ನಾವು ನಮ್ಮ ಗಾರ್ಹಿಕ ಜೀವಿತವನ್ನು ಉತ್ತಮಪಡಿಸಲು ಮತ್ತು ಮಕ್ಕಳಿಗೆ ಉತ್ತಮ ತರಬೇತಿ ನೀಡಲು ಸಮಯವನ್ನು ವಿನಿಯೋಗಿಸಲು ಪ್ರಯತ್ನಿಸಬೇಕು.**

**ಎಂ.ಟಿ.ಎ.ದಲ್ಲಿ ಬಹಳ ಉತ್ತಮ ಕಾರ್ಯಕ್ರಮಗಳು ಬರುತ್ತಾ ಇವೆ. ಆ ಕಾರ್ಯಕ್ರಮಗಳನ್ನು ಒಟ್ಟಿಗೆ ಕುಳಿತು ನೋಡಲು ಪ್ರಯತ್ನಿಸಿರಿ.**

**ಅದಲ್ಲದೆ ಸರಕಾರ ಜನರ ಹಿತಕ್ಕೋಸ್ಕರ, ಎಂದರೆ ನಿಮ್ಮ ಆರೋಗ್ಯ ಕಾಪಾಡಲು ನೀಡಿದ ಮಾರ್ಗದರ್ಶನಗಳನ್ನು ಮತ್ತು ಜಾರಿಗೊಳಿಸಿದ ನಿಯಮಗಳನ್ನು ಪೂರ್ಣವಾಗಿ ಬದ್ಧತೆಯಿಂದ ಪಾಲಿಸಿರಿ.**

**ಎಲ್ಲವುಗಳಿಗಿಂತ ಮಿಗಿಲಾಗಿ ಪ್ರಾರ್ಥನೆ ಮಾಡುವ ಬಗ್ಗೆ ಬಹಳ ಗಮನ ಹರಿಸಿರಿ. ಪ್ರಾರ್ಥನೆಗಳ ಮೂಲಕ ನಾವು ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳಬಹುದಾಗಿದೆ. ನಮ್ಮ ಶಾರೀರಿಕ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಆರೋಗ್ಯ ಭರಿತವನ್ನಾಗಿ ಮಾಡಬಹುದಾಗಿದೆ.**

---

**ಅಲ್ಲಾಹನು ಈ ಮಹಾಮಾರಿಯಿಂದ ಲೋಕವನ್ನು ಬೇಗನೆ ಮುಕ್ತವನ್ನಾಗಿ ಮಾಡಲಿ. ಲೋಕದ ಜನರನ್ನು ಮಾನವೀಯತೆಯ ಆವಶ್ಯಕತೆಗಳನ್ನು ಈಡೇರಿಸುವವರನ್ನಾಗಿ ಮಾಡಲಿ. ಅವರೆಲ್ಲರೂ ಸೃಷ್ಟಿಕರ್ತನಾದ ದೇವನನ್ನು ಗುರುತಿಸುವವರಾಗಲಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–03–2020** ರಂದು ನೀಡಿದ **ವಿಶೇಷ ಸಂದೇಶ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಲೋಕದಲ್ಲಿ ಹಬ್ಬಿರುವ ವೈರಸಿನ ಸಾಂಕ್ರಾಮಿಕ ರೋಗದ ಹಾವಳಿಯ ಕಾರಣದಿಂದ ಸರಕಾರಗಳು ಮಸ್‌ಜಿದ್‌ಗಳಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸುವುದರ ಮೇಲೆ ನಿರ್ಬಂಧಗಳನ್ನು ಹೇರಿವೆ. ಬ್ರಿಟನಿನ ಸರಕಾರ ಸಹ ಮಸ್‌ಜಿದ್‌ಗಳಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸಬಾರದೆಂದೂ ನಿರ್ವಹಿಸುವುದಾದರೆ ಇಬ್ಬರು ಅಥವಾ ಕೆಲವು ಜನರಿಗಿಂತ ಹೆಚ್ಚಿಗಿರಬಾರದೆಂದೂ ಅವರು ಮಸ್‌ಜಿದ್ ಇರುವ ಸ್ಥಳದ ನಿವಾಸಿಗಳಾಗಬೇಕೆಂದೂ ಆಜ್ಞಾಪಿಸಿದೆ. ಈಗಲೂ ಈ ಆಜ್ಞೆ ಸ್ಪಷ್ಟವಾಗಿಲ್ಲ. ಕೆಲವರು ಒಂದು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ ಮತ್ತು ಬೇರೆ ಕೆಲವರು ಬೇರೆ ರೀತಿಯಲ್ಲಿ ಹೇಳುತ್ತಾರೆ. ನಿಕಟ ಸಂಬಂಧಿಕರು ಮಾತ್ರ ಭಾಗವಹಿಸಬಹುದೆಂದು ಕೆಲವರು ಹೇಳುತ್ತಾರೆ. ಬೇರೆ ಕೆಲವರು ಹೇಳುತ್ತಾರೆ, ಸ್ನೇಹಿತರು ಮತ್ತು ಜೊತೆಗೆ ವಾಸಿಸುವವರು ಭಾಗವಹಿಸಬಹುದೆಂದು. ಆದುದರಿಂದ ಇಂದಿನ ಪರಿಸ್ಥಿತಿಯಲ್ಲಿ ಅಧಿಕೃತವಾಗಿ ಸ್ಪಷ್ಟನೆ ದೊರಕುವ ತನಕ ಜುಮುಅ ನಮಾಝ್ ನಿರ್ವಹಿಸಲು ಸಾಧ್ಯವಿಲ್ಲ. ಏಕೆಂದರೆ ಜುಮುಅಕ್ಕೆ

ಸಂಬಂಧಿಸಿ ಕೆಲವು ವಿಷಯಗಳು ವಿಶದೀಕರಿಸುವ ಆವಶ್ಯಕತೆ ಇದೆ. ಆದುದರಿಂದ ನಾನು ಸಮಾಲೋಚನೆ ನಡೆಸಿದ ನಂತರ ಹೀಗೆ ನಿರ್ಧರಿಸಿದೆ: ಖುತುಬಕ್ಕೆ ಬದಲಾಗಿ ನನ್ನ ಕಚೇರಿಯಿಂದಲೇ ಒಂದು ಸಂದೇಶವನ್ನು ನೀಡಿ ನಿಮ್ಮೊಂದಿಗೆ ಮಾತನಾಡುವೆನು ಎಂದು. ಜನರಿಗೆ ಜುಮುಅ ದಿವಸ ಎಂ.ಟಿ.ಎ. ಮೂಲಕ ಖಲೀಫರ ಖುತ್‌ಬ ಆಲಿಸುವ ಅಭ್ಯಾಸವಾಗಿ ಬಿಟ್ಟಿದೆ. ಈ ದಿನ ಈ ಸಮಯದಲ್ಲಿ ನಾನು ಜಮಾಅತನ್ನು ಸಂಬೋಧಿಸಿ ಮಾತನಾಡದಿದ್ದರೆ ಜನರಿಗೆ ನಿರಾಶೆಯಾಗಬಹುದು. ಅದಲ್ಲದೆ ವಿವಿಧ ರೀತಿಗಳ ಊಹಾಪೋಹಗಳು ಸಹ ಪ್ರಾರಂಭವಾಗುತ್ತವೆ. ಆದುದರಿಂದ ಯಾವುದಾದರೊಂದು ರೀತಿಯಲ್ಲಿ ಜಮಾಅತನ್ನು ಸಂಬೋಧಿಸಿ ಮಾತನಾಡಬೇಕೆಂದೂ ನನ್ನ ಕಚೇರಿಯಲ್ಲಿ ಕುಳಿತುಕೊಂಡು ನಿಮ್ಮನ್ನು ಸಂಬೋಧಿಸಿ ಮಾತನಾಡಬೇಕೆಂದೂ ನಾನು ನಿರ್ಧರಿಸಿದೆ.

ಒಟ್ಟಾರೆ ಹೇಳುವುದಾದರೆ, ನಾನು ಹೇಳಿದ ಹಾಗೆ ನಾವು ಇಂದು ಜುಮುಅ ನಮಾಝ್ ನಿರ್ವಹಿಸುವುದಿಲ್ಲ. ಮುಂದೆ ನಾವು ಯಾವ ರೀತಿ ವರ್ತಿಸುವೆವು ಎಂಬುದರ ಬಗ್ಗೆ ಇನ್‌ಶಾಅಲ್ಲಾಹ್ ಮುಂದೆ ತಿಳಿಸುವೆನು. ದೀರ್ಘಕಾಲದ ತನಕ ಜುಮುಅವನ್ನು ಬಿಟ್ಟುಬಿಡಲು ಸಹ ಸಾಧ್ಯವಿಲ್ಲ. ಜಮಾಅತ್‌ನೊಂದಿಗೆ ನನ್ನ ಸಂಪರ್ಕವಿರುವುದು ಸಹ ಆವಶ್ಯಕವಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ವಿಶಿಷ್ಟವಾಗಿ ಹೆಚ್ಚು ಆವಶ್ಯಕತೆ ಇದೆ. ಆದುದರಿಂದ ನಾವು ವಕೀಲರೊಂದಿಗೆ ಮತ್ತು ಸಂಬಂಧಿತ ಜನರೊಂದಿಗೆ ಸಮಾಲೋಚಿಸಿದ ನಂತರ ಇನ್‌ಶಾಅಲ್ಲಾಹ್ ಪರಿಹಾರ ಮಾರ್ಗ ಕಂಡುಕೊಳ್ಳುವೆವು. ಜಮಾಅತಿನ ಸದಸ್ಯರೊಂದಿಗೆ ನಾನು ಹೇಳುವುದೇನೆಂದರೆ ಈ ರೋಗದ ಕಾರಣದಿಂದ ಸರಕಾರ ಮಸ್‌ಜಿದ್‌ನಲ್ಲಿ ನಮಾಝ್ ನಿರ್ವಹಿಸುವುದನ್ನು ನಿರ್ಬಂಧಿಸಿದ್ದರೆ ಜಮಾಅತ್ ಸದಸ್ಯರು ತಮ್ಮ ಮನೆಗಳಲ್ಲಿಯೇ ಬಾಜಮಾಅತ್ ನಮಾಝ್ ನಿರ್ವಹಿಸಲು ಏರ್ಪಾಡು ಮಾಡಬೇಕು. ಜುಮುಅ ಸಹ ಮನೆಯ ಸದಸ್ಯರು ಸೇರಿಕೊಂಡು ನಿರ್ವಹಿಸಬೇಕು. ಇಲ್ಲಿ ಯು.ಕೆ.ಯಲ್ಲಿ ಮಸ್‌ಜಿದ್‌ಗೆ ಒಬ್ಬೊಬ್ಬರಾಗಿ ಬಂದು ನಮಾಝ್ ನಿರ್ವಹಿಸಹುದು ಅಥವಾ ಕುಟುಂಬದ ಕೆಲವರು ಬಂದು ನಮಾಝ್ ನಿರ್ವಹಿಸಬಹುದು. ಆದರೂ ಪರಸ್ಪರ ಹತ್ತಿರವಿರಬಾರದೆಂಬ ನಿಯಮದೊಂದಿಗೆ ಹೀಗೆ ಆಜ್ಞಾಪಿಸಲಾಗಿದೆ. ಮಲ್‌ಫೂಝಾತ್‌ನಿಂದ, ಜಮಾಅತಿನ ಇತರ ಗ್ರಂಥಗಳಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇತರ ಗ್ರಂಥಗಳಿಂದ, ಅಲ್‌ಫಝುಲ್ ಪತ್ರಿಕೆಯಿಂದ, ಅಲ್‌ಹಕಮ್ ಪತ್ರಿಕೆಯಿಂದ ಅಥವಾ ಬೇರೆ ಪುಸ್ತಕಗಳಿಂದಲೂ ಯಾವುದಾದರೂ ಉದ್ಧರಣೆಗಳನ್ನು ಓದಿ ಖುತ್‌ಬ ನೀಡಬಹುದು. ಮನೆಯಲ್ಲಿರುವ ಪ್ರಾಪ್ತ ವಯಸ್ಕನಾದ ಬಾಲಕ ಅಥವಾ ಪುರುಷ ಜುಮುಅ ಖುತ್‌ಬ ನೀಡಿ ನಮಾಝ್ ನಿರ್ವಹಿಸಬಹುದು. ಜುಮುಅ ನಮಾಝ್ ದೀರ್ಘ ಕಾಲ ನಿರ್ವಹಿಸದಿರಲು ಸಾಧ್ಯವಿಲ್ಲ. ಮನೆಯಲ್ಲಿ ಜುಮುಅ ನಮಾಝ್ ನಿರ್ವಹಿಸಲು ಅದಕ್ಕೋಸ್ಕರ ಸಿದ್ಧತೆಗಳನ್ನು ಮಾಡುವರು. ಅವರು ಪುಸ್ತಕಗಳನ್ನು ಓದುವರು ಮತ್ತು ಜ್ಞಾನ ವೃದ್ಧಿಯಾಗುವುದು. ಈ ರೀತಿ ಸರಕಾರದ ನಿರ್ಬಂಧ ಪ್ರಕಾರ ಮನೆಯಲ್ಲಿ ಕುಳಿತುಕೊಳ್ಳುವುದು ಸಹ ಧಾರ್ಮಿಕ ಮತ್ತು ಆಧ್ಯಾತ್ಮಿಕವಾಗಿ ಲಾಭಕರವಾಗುವುದು. ಜ್ಞಾನವರ್ಧನೆಗೆ ಕಾರಣವಾಗುವುದು.

ಈಗ ಅಲ್‌ಹಕಮ್ ಪತ್ರಿಕೆಯು **"ನಾವು ಮನೆಯಲ್ಲಿ ಈ ಬಿಡುವು ಸಮಯವನ್ನು ಹೇಗೆ ವಿನಿಯೋಗಿಸುತ್ತೇವೆ"** ಎಂಬ ಶೀರ್ಷಿಕೆಯಲ್ಲಿ ಜನರ ಹೇಳಿಕೆಗಳನ್ನು ಪ್ರಕಟಿಸಲು ತೊಡಗಿದೆ. ಬಹುತೇಕ ಜನರು ಹೇಳುತ್ತಾರೆ: ಪವಿತ್ರ ಖುರ್‌ಆನ್, ಹದೀಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳು ಮತ್ತು ಜಮಾಅತಿನ ಇತರ ಸಾಹಿತ್ಯಗಳನ್ನು ಓದಿ ನಾವು ನಮ್ಮ ಜ್ಞಾನವನ್ನು ಅಭಿವೃದ್ಧಿಗೊಳಿಸುತ್ತಿದ್ದೇವೆ ಎಂದು. ಸಾಮೂಹಿಕ ಮಾಧ್ಯಮಗಳಲ್ಲಿಯೂ ಲೌಕಿಕ ಜನರು ಸಹ ಹೇಳುತ್ತಿದ್ದಾರೆ – ನಮಗೆ ನಮ್ಮ ಗಾರ್ಹಿಕ ಜೀವಿತವನ್ನು ಉತ್ತಮ ಪಡಿಸಲು ಸಂದರ್ಭ ಸಿಗುತ್ತದೆ, ನಮ್ಮ ಮನೆಯ ಜೀವಿತ ಶೈಲಿ ಮರಳಿ ಬರುತ್ತಿದೆ ಎಂದು.

ಆದುದರಿಂದ ನಾವು ನಮ್ಮ ಗಾರ್ಹಿಕ ಜೀವಿತವನ್ನು ಉತ್ತಮಪಡಿಸಲು ಮತ್ತು ಮಕ್ಕಳಿಗೆ ಉತ್ತಮ ತರಬೇತಿ ನೀಡಲು ಸಮಯವನ್ನು ವಿನಿಯೋಗಿಸಲು ಪ್ರಯತ್ನಿಸಬೇಕು. ಎಂ.ಟಿ.ಎ.ದಲ್ಲಿ ಬಹಳ ಉತ್ತಮ ಕಾರ್ಯಕ್ರಮಗಳು ಬರುತ್ತಾ ಇವೆ. ಆ ಕಾರ್ಯಕ್ರಮಗಳನ್ನು ಒಟ್ಟಿಗೆ ಕುಳಿತು ನೋಡಲು ಪ್ರಯತ್ನಿಸಿರಿ. ಅದಲ್ಲದೆ ಸರಕಾರ ಜನರ ಹಿತಕ್ಕೋಸ್ಕರ, ಎಂದರೆ ನಿಮ್ಮ ಆರೋಗ್ಯ ಕಾಪಾಡಲು ನೀಡಿದ ಮಾರ್ಗದರ್ಶನಗಳನ್ನು ಮತ್ತು ಜಾರಿಗೊಳಿಸಿದ ನಿಯಮಗಳನ್ನು ಪೂರ್ಣವಾಗಿ ಬದ್ಧತೆಯಿಂದ ಪಾಲಿಸಿರಿ. ನಾನು ಹಿಂದಿನ ಖುತ್‌ಬಗಳಲ್ಲಿ ಹೇಳಿದ ಹಾಗೆ ಎಲ್ಲವುಗಳಿಗಿಂತ ಮಿಗಿಲಾಗಿ ಪ್ರಾರ್ಥನೆ ಮಾಡುವ ಬಗ್ಗೆ ಬಹಳ ಗಮನ ಹರಿಸಿರಿ. ಪ್ರಾರ್ಥನೆಗಳ ಮೂಲಕ ನಾವು ಅಲ್ಲಾಹನ ಅನುಗ್ರಹಗಳನ್ನು ಹೀರಿಕೊಳ್ಳಬಹುದಾಗಿದೆ. ನಮ್ಮ ಶಾರೀರಿಕ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಆರೋಗ್ಯ ಭರಿತವನ್ನಾಗಿ ಮಾಡಬಹುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಪದೇ ಪದೇ ಇದನ್ನೇ ಉಪದೇಶಿಸಿದ್ದಾರೆ. ಇಂತಹ ಪರಿಸ್ಥಿತಿಗಳಲ್ಲಿಯೂ ಹೀಗೆ ಉಪದೇಶಿಸಿದ್ದಾರೆ: ಎಲ್ಲದಕ್ಕಿಂತ ಆವಶ್ಯಕರವಾದ ವಿಷಯ, ಸರ್ವಶಕ್ತನಾದ ಅಲ್ಲಾಹನಿಂದ ಪಾಪದೋಷಗಳ ಬಗ್ಗೆ ಕ್ಷಮೆಯನ್ನು ಯಾಚಿಸುವುದಾಗಿದೆ. ಹೃದಯವನ್ನು ಶುದ್ಧೀಕರಿಸಿರಿ. ಸತ್ಕರ್ಮ ನಿರತರಾಗಿರಿ. ಅಲ್ಲಾಹನು ನಮಗೆ ದುಆ ಎಂಬ ಬಹಳ ದೊಡ್ಡ ಆಯುಧ ನೀಡಿದ್ದಾನೆ. ಅದರ ಮೂಲಕ ಅಲ್ಲಾಹನ ಆಶ್ರಯ ಪಡೆಯಲು ನಾವು ಪ್ರಯತ್ನಿಸಬೇಕು ಮತ್ತು ಅದರ ಬಗ್ಗೆ ಶ್ರದ್ಧೆ ಹರಿಸಬೇಕು.

ಜುಮುಅ ನಮಾಝ್ ನಿರ್ವಹಿಸದಿರುವ ಪ್ರಶ್ನೆ ಬಗ್ಗೆ ಹೇಳುವುದಾದರೆ, ಕೆಲವು ಪರಿಸ್ಥಿತಿಗಳಲ್ಲಿ ಬಾಜಮಾಅತ್ ನಮಾಝ್ ಮತ್ತು ಜುಮುಅ ನಮಾಝ್ ಬಿಟ್ಟುಬಿಡಬಹುದೆಂದು ಕೆಲವು ಹದೀಸುಗಳಿಂದ ಸಾಬೀತಾಗುತ್ತದೆ. ಬುಖಾರಿಯ ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಮಳೆ ಸುರಿಯುತ್ತಿದ್ದಾಗ ಹಝ್ರತ್ ಇಬ್ನು ಅಬ್ಬಾಸ್ ತನ್ನ ಅಝಾನ್ ಕರೆ ನೀಡುವವನೊಂದಿಗೆ ಹೇಳಿದರು: **ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್ ಅಶ್‌ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್** ಎಂದು ಹೇಳಿದ ನಂತರ **ಹಯ್ಯಅಲಸ್ಸಲಾತ್ ಎಂದು ಹೇಳದೆ ಅದರ ಬದಲು ಸಲ್ಲೂ ಅಲಾ ಬುಯೂತಿಕುಮ್** ನಿಮ್ಮ ಮನೆಗಳಲ್ಲಿ ನಮಾಝ್ ಮಾಡಿರಿ ಎಂದು ಹೇಳಬೇಕು. ಆಗ ಜನರಿಗೆ ಆಶ್ಚರ್ಯವಾಯಿತು. ಅವರಿಗೆ ಅದು ಹೊಸದಾಗಿ ತೋರಿತು. ಆಗ ಹಝ್ರತ್ ಇಬ್ನು ಅಬ್ಬಾಸ್ ಹೇಳಿದರು: ನನಗಿಂತ ಶ್ರೇಷ್ಠರಾಗಿದ್ದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆಯೇ ವರ್ತಿಸಿದ್ದರು. ಜುಮುಅ ನಮಾಝ್ ನಿರ್ವಹಿಸುವುದು ಆವಶ್ಯಕವಾಗಿದ್ದರೂ ನಿಮ್ಮನ್ನು ಕಷ್ಟಕ್ಕೆ ಗುರಿಪಡಿಸಿ ನೀವು ಕೆಸರಿನಲ್ಲಿ ಜಾರಿಕೊಂಡು ನಡೆಯುವುದನ್ನು ನಾನು ಇಷ್ಟಪಡುವುದಿಲ್ಲ ಎಂದು ಹೇಳಿದರು. (ಸಹೀಹ್ ಬುಖಾರಿ ಕಿತಾಬುಲ್ ಜುಮುಅ ಅರ್‌ರುಖ್ಸತು ಲಿಮ್ಮೆಂಯಹ್‌ಝುರುಲ್ ಜುಮುಅತಿ ಹದೀಸ್–901)

ಮುಸ್ಲಿಮ್ ಹದೀಸ್ ಗ್ರಂಥದಲ್ಲಿಯೂ ಈ ಹದೀಸು ವರದಿಯಾಗಿದೆ. ಹಝ್ರತ್ ಇಬ್ನು ಅಬ್ಬಾಸ್ ಮಳೆ ಸುರಿಯುತ್ತಿದ್ದ ದಿನ ಅಝಾನ್ ಕರೆ ನೀಡುವವನೊಂದಿಗೆ ಹೇಳಿದರು: **ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹ್ ಅಶ್‌ಹದು ಅನ್ನ ಮುಹಮ್ಮದುರ್ರಸೂಲುಲ್ಲಾಹ್** ಉಚ್ಚರಿಸಿದ ಬಳಿಕ **ಹಯ್ಯಅಲಸ್ಸಲಾ** ಎಂದು ಹೇಳಬೇಡ **ಸಲ್ಲೂ ಅಲಾ ಬುಯೂತಿಕುಮ್** ಎಂದು ಹೇಳು. ವರದಿಗಾರ ಹೇಳುತ್ತಾರೆ: ಜನರಿಗೆ ಇದು ಹೊಸದಾಗಿ ಕಾಣಿಸಿತು. ಆಗ ಇಬ್ನು ಅಬ್ಬಾಸ್ ಹೇಳಿದರು: ನೀವು ಯಾಕೆ ಇದರ ಬಗ್ಗೆ ಆಶ್ಚರ್ಯ ಪಡುತ್ತೀರಿ. ನನಗಿಂತ ಶ್ರೇಷ್ಠರಾಗಿದ್ದವರು ಈ ರೀತಿ ಮಾಡಿದ್ದರು. ಜುಮುಅ ನಮಾಝ್ ನಿರ್ವಹಿಸುವುದು ಆವಶ್ಯಕವಾಗಿದ್ದರೂ ನೀವು ಕೆಸರಿನಲ್ಲಿ ಜಾರಿಕೊಂಡು ನಡೆದು ಬರುವುದನ್ನು ನಾನು ಇಷ್ಟಪಡುವುದಿಲ್ಲ. (ಸಹೀಹ್ ಮುಸ್ಲಿಮ್, ಕಿತಾಬುಸ್ಸಲಾತ್ ಬಾಬ್ ಅಸ್ಸಲಾತು ಫಿರ್‌ರಿಹಾಲ ಫಿಲ್ ಮತರಿ ಹದೀಸ್–699)

ಅಲ್ಲಾಮ ಇಮಾಂ ನವವಿ ಈ ಹದೀಸಿಗೆ ವ್ಯಾಖ್ಯಾನ ಬರೆಯುತ್ತಾ ಹೇಳುತ್ತಾರೆ: ಮಳೆ ಮೊದಲಾದವುಗಳ ಕಾರಣದಿಂದ ಜುಮುಅ ನಮಾಝನ್ನು ಸ್ಥಗಿತಗೊಳಿಸುವ ಬಗ್ಗೆ ಸಾಕ್ಷ್ಯಾಧಾರ ಈ ಹದೀಸಿನಲ್ಲಿದೆ. ನಮ್ಮ ಅಭಿಪ್ರಾಯ ಸಹ ಇದೇ ಆಗಿದೆ. ಇತರ ಕರ್ಮಶಾಸ್ತ್ರ ಪಂಡಿತರು (ಫುಖಹಾ) ಇದೇ ಅಭಿಪ್ರಾಯ ಹೊಂದಿದ್ದಾರೆ. ಆದರೆ ಇಮಾಮ್ ಮಾಲಿಕ್ ಇದಕ್ಕೆ ವಿರುದ್ಧ ಅಭಿಪ್ರಾಯ ಹೊಂದಿದ್ದಾರೆ. ವಲ್ಲಾಹು ಅಅ್‌ಲಮು ಬಿಸ್ಸವಾಬ್. ಅಲ್ಲಾಹನಿಗೆ ಮಾತ್ರ ಚೆನ್ನಾಗಿ ತಿಳಿದಿದೆ. (ಅಲ್‌ಮಿನ್‌ಹಾಜ್ ಶರಹ್ ಸಹೀಹ್ ಮುಸ್‌ಲಿಮ್ ಸಂಪುಟ–5, ಪುಟ–208, ಕಿತಾಬುಸ್ಸಲಾತ್ ಬಾಬ್ ಅಸ್ಸಲಾತು ಫಿರ್‌ರಿಹಾಲ ಫಿಲ್ ಮತರಿ ಹದೀಸ್–699)

ಇದೇ ರೀತಿ ಕರ್ಮಶಾಸ್ತ್ರ ಪಂಡಿತರು ಬಾಜಮಾಅತ್ ನಮಾಝ್ ಮತ್ತು ಜುಮುಅ ತ್ಯಜಿಸುವ ಕಾರಣವಾಗಿ ಮಸ್‌ಜಿದ್‌ಗೆ ಬರಲು ಸಾಧ್ಯವಾಗದಷ್ಟು ರೋಗ ಪೀಡಿತನಾಗುವುದನ್ನು ಸೇರಿಸಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ – ನಿಮಗೆ ಧರ್ಮದಲ್ಲಿ ಯಾವುದೇ ಸಂಕಷ್ಟವನ್ನು ಇರಿಸಿಲ್ಲ ಎಂಬುದನ್ನು ಇದಕ್ಕೆ ಸಾಕ್ಷ್ಯಾಧಾರವಾಗಿ ಅವರು ಉಲ್ಲೇಖಿಸಿದ್ದಾರೆ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರೋಗ ಬಾಧಿತರಾಗಿದ್ದಾಗ ಮಸ್‌ಜಿದ್‌ಗೆ ಹೋಗುವುದನ್ನು ನಿಲ್ಲಿಸಿದರು ಮತ್ತು ಹಝ್ರತ್ ಅಬೂಬಕರ್‌ರೊಂದಿಗೆ ನಮಾಝ್‌ಗಳ ಇಮಾಮತ್ ನಿರ್ವಹಿಸಲು ಹೇಳಿದರು. ಸಹೀಹ್ ಬುಖಾರಿಯಲ್ಲಿಯೂ ಸಹೀಹ್ ಮುಸ್ಲಿಮ್‌ನಲ್ಲಿಯೂ ಈ ಹದೀಸು ವರದಿಯಾಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಅಝಾನ್ ಬಾಬ್ ಅಹ್‌ಲುಲ್ ಇಲ್ಮಿ ವಲ್ ಫಝ್ಲಿ ಅಹಖು ಬಿಲ್ ಇಮಾಮ ಹದೀಸ್–680–681) (ಸಹೀಹ್ ಮುಸ್ಲಿಮ್ ಕಿತಾಬುಸ್ಸಲಾತ್ ಬಾಬ್ ಇಸ್ತಿಖ್ಲಾಫುಲ್ ಇಮಾಮ್ ಹದೀಸ್–419)

ಅದೇ ರೀತಿ ಯಾವುದಾದರೂ ರೋಗ ಬಾಧೆಯುಂಟಾಗುವ ಭಯವನ್ನು ಸಹ ಮಸ್‌ಜಿದ್‌ಗೆ ಹೋಗದಿರಲು ಕಾರಣವಾಗಿ ಸೂಚಿಸಲಾಗಿದೆ. ಇದಕ್ಕೆ ಸಾಕ್ಷ್ಯಾಧಾರ ಹಝ್ರತ್ ಇಬ್ನು ಅಬ್ಬಾಸರ ಈ ಹದೀಸ್ ಆಗಿದೆ: ಹಝ್ರತ್

ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್‌ಜಿದ್‌ಗೆ ಹೋಗದಿರಲು ಕಾರಣವನ್ನು ವ್ಯಾಖ್ಯಾನಿಸುತ್ತಾ ಅದು ಭಯ ಮತ್ತು ರೋಗ ಎಂದು ಹೇಳಿದ್ದಾರೆ. ಈ ಹದೀಸು ಸುನನ್ ಅಬೂ ದಾವೂದ್‌ನಲ್ಲಿ ವರದಿಯಾಗಿದೆ. (ಸನನ್ ಅಬಿ ದಾವೂದ್ ಕಿತಾಬುಸ್ಸಲಾತ್ ಹದೀಸ್–551)

ಒಟ್ಟಾರೆ ಹೇಳುವುದಾದರೆ, ಈ ರೋಗ ಸಾಂಕ್ರಾಮಿಕವಾಗಿ ಹರಡುವ ಭಯವಿದೆ. ಸರಕಾರ ಸಹ ಇದರ ಬಗ್ಗೆ ಕೆಲವು ಕಾನೂನು ಕಾಯಿದೆಗಳನ್ನು ಜಾರಿಗೊಳಿಸಿದೆ. ದೇಶದ ನಿಯಮಗಳನ್ನು ಪಾಲಿಸುವುದು ಆವಶ್ಯಕವಾಗಿದೆ. ಈ ಕಾರಣದಿಂದ ಒಂದು ಸ್ಥಳದಲ್ಲಿ ಒಟ್ಟು ಸೇರುವುದು, ಬಾಜಮಾಅತ್ ನಮಾಝ್ ನಿರ್ವಹಿಸುವುದು ಅಥವಾ ಜುಮುಅ ನಮಾಝ್ ನಿರ್ವಹಿಸುವುದು ಅಸಾಧ್ಯವಾಗಿದೆ. ಆದರೆ ನಾನು ಇದರ ಮೊದಲು ಹೇಳಿದ ಹಾಗೆ ಮನೆಗಳಲ್ಲಿ ಬಾಜಮಾಅತ್ ನಮಾಝ್ ಅನುಷ್ಠಿಸುವ ರೂಢಿ ಮಾಡಿಕೊಳ್ಳಿರಿ. ಆ ಮೂಲಕ ಮಕ್ಕಳಿಗೆ ನಮಾಝ್ ಮತ್ತು ಬಾಜಮಾಅತ್ ನಮಾಝ್ ನಿರ್ವಹಿಸುವ ಆವಶ್ಯಕತೆ ಇದೆ ಎಂಬುದರ ಬಗ್ಗೆ ಮನವರಿಕೆ ಆಗುವುದು. ಇಂದಿನ ಪರಿಸ್ಥಿತಿಯಲ್ಲಿ ನಮಗೆ ಮಸ್‌ಜಿದ್‌ಗೆ ಹೋಗಲು ಸಾಧ್ಯವಿಲ್ಲ. ಆದರೆ ನಾವು ಈ ಫರ್ಝ್ ಕೃತ್ಯವನ್ನು ನಮ್ಮ ಮನೆಗಳಲ್ಲಿ ನಿರ್ವಹಿಸುವುದು ಆವಶ್ಯಕವಾಗಿದೆ ಎಂದು ಅವರು ಮನವರಿಕೆ ಮಾಡಿಕೊಳ್ಳುವರು. ಇದರ ಬಗ್ಗೆ ವಿಶಿಷ್ಟವಾಗಿ ಗಮನ ಹರಿಸಿರಿ. ಕೆಲವೊಮ್ಮೆ ಪ್ರಯಾಣ ಮಾಡುತ್ತಿದ್ದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಇಂತಹ ಸ್ಥಿತಿ ತಲೆದೂರಿತ್ತು. (ಅಲ್‌ಫಝ್ಲ್ ದಿನಾಂಕ 24, ಜನವರಿ 1924, ಪುಟ–1, ಸಂಪುಟ–20, ಸಂಚಿಕೆ–21)

ಆಗ ಅವರು ಜುಮುಅ ನಿರ್ವಹಿಸಿರಲಿಲ್ಲ. ಅನೇಕ ವರದಿಗಳಿವೆ, ಅವುಗಳು ಈ ವಿಷಯ ವಿಶದೀಕರಿಸುತ್ತಿವೆ. ಸಾಂಕ್ರಾಮಿಕ ರೋಗದ ಕಾಲದಲ್ಲಿ ಜಮಾಯಿಸುವುದು ಮತ್ತು ಒಬ್ಬರಿನ್ನೊಬ್ಬರನ್ನು ಭೇಟಿಯಾಗುವುದು ಸರಿಯಲ್ಲ ಎಂದು ವರದಿಯಾಗಿದೆ. ರೋಗಿಗಳನ್ನು ಬೇರೆಯಾಗಿರಿಸಬೇಕು. ನಾನು ಇದರ ಮೊದಲು ಹೇಳಿದ ಹಾಗೆ ನಾವು ಸ್ಥಿರವಾಗಿ ಜುಮುಅ ನಮಾಝ್ ಬಿಟ್ಟುಬಿಡುವುದಿಲ್ಲ. ನಾವು ಅದರ ಬಗ್ಗೆ ಬದಲಿ ವ್ಯವಸ್ಥೆ ಮಾಡುತ್ತಿದ್ದೇವೆ. ಮನೆಗಳಲ್ಲಿ ಜುಮುಅ ನಿರ್ವಹಿಸುವೆವು. ನಾನು ಸಹ ಅದರ ಬಗ್ಗೆ ವ್ಯವಸ್ಥೆ ಮಾಡುವೆನು.

ಈಗ ದುಆ ಮಾಡುವುದು ಆವಶ್ಯಕವಾಗಿದೆ. ಅಲ್ಲಾಹನು ಅನುಗ್ರಹ ನೀಡಲಿ ಎಂದು ಪ್ರಾರ್ಥಿಸಿರಿ. ಅಲ್ಲಾಹನು ಈ ಮಹಾಮಾರಿಯಿಂದ ಲೋಕವನ್ನು ಬೇಗನೆ ಮುಕ್ತವನ್ನಾಗಿ ಮಾಡಲಿ. ಲೋಕದ ಜನರನ್ನು ಮಾನವೀಯತೆಯ ಆವಶ್ಯಕತೆಗಳನ್ನು ಈಡೇರಿಸುವವರನ್ನಾಗಿ ಮಾಡಲಿ. ಅವರೆಲ್ಲರೂ ಸೃಷ್ಟಿಕರ್ತನಾದ ದೇವನನ್ನು ಗುರುತಿಸುವವರಾಗಲಿ. ಅಲ್ಲಾಹನು ನಮಗೆಲ್ಲರಿಗೂ ಅಂತಹ ಭಾಗ್ಯ ದಯಪಾಲಿಸಲಿ – ಆಮೀನ್.

**ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ.**

******************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅದು ಇತರರಿಗೆ ಮಾರ್ಗದರ್ಶನ ಹಾಗೂ ಪುಣ್ಯದಾಯಕವಾಗಿರಬೇಕು.

**ಪರಲೋಕದ ಬಗ್ಗೆ ಗಮನವಿರಿಸಿ**

ಹೇಳಿದರು. ಪರಲೋಕದ ಬಗ್ಗೆ ಗಮನವಿರಿಸಿಕೊಳ್ಳುವುದು ಜನರಿಗೆ ಅನಿವಾರ್ಯವಾಗಿರುತ್ತದೆ. ಶಿಕ್ಷೆಯಿಂದ ಮೊದಲು ಎಚ್ಚರವಹಿಸಬೇಕಾಗಿದೆ.

**"ಮರ್‌ದ್ ಆಖಿರ್ ಬೀನ್ ಮುಬಾರಕ್ ಬಂದ ಈಸ್ತ್"** (ಅಂತ್ಯ ದಿನದ ಮೇಲೆ ದೃಷ್ಟಿ ಹಾಯಿಸುವವನೇ ಮಹಾ ಪುರುಷನಾಗಿದ್ದಾನೆ)

ನೋಡಿರಿ! ಲೂತ್ ಮುಂತಾದ ಸಮುದಾಯಗಳ ಪರಿಣಾಮ ಏನಾಗಿದೆ. ಪ್ರತಿಯೊಬ್ಬರಿಗೆ ಅನಿವಾರ್ಯವಾದುದ್ದೇನೆಂದರೆ ನಿಮ್ಮ ಹೃದಯಗಳು ಕಠಿಣಗೊಂಡರೂ ಅದನ್ನು ಶಪಿಸುತ್ತ ವಿನಮ್ರತೆಯಿಂದ ಉಪದೇಶ ನೀಡಬೇಕು. ನಮ್ಮ ಜಮಾಅತಿಗೆ ಇದು ಅನಿವಾರ್ಯವಾಗಿದೆ. ಏಕೆಂದರೆ ಅವರಿಗೆ ಹೊಸದಾಗಿ ಪರಿಪೂರ್ಣ ಜ್ಞಾನ ನೀಡಲಾಗಿದೆ. ಯಾರಾದರೂ ದೇವಜ್ಞಾನದ ಮಾತನ್ನಾಡಿ ಅದರಂತೆ ನಡೆದುಕೊಳ್ಳದಿದ್ದರೆ ಅದು ಕೇವಲ ಉಡಾಫೆಯಾಗುವುದು. ಆದುದರಿಂದ ನಮ್ಮ ಜಮಾಅತ್ ಇತರರಂತೆ ಅಲಕ್ಷ್ಯವಹಿಸುವವರಾಗಬಾರದು. ಅವರಲ್ಲಿ ಪ್ರೀತಿಯ ಕೊರತೆ ಕಂಡು ನಿಮ್ಮ ಪ್ರೀತಿಯ ಮೇಲೆ ತಣ್ಣೀರು ಎರಚಬಾರದು. ಮನುಷ್ಯನು ಬಹಳಷ್ಟು ಆಸೆ ಆಕಾಂಕ್ಷೆಯನ್ನು ಹೊಂದಿರುತ್ತಾನೆ. ಅಗೋಚರ ವಿಧಿಯ ಜ್ಞಾನ ಯಾರಿಗಿದೆ. ಆಸೆ ಆಕಾಂಕ್ಷೆಗಳಂತೆ ಜೀವನ ಎಂದೂ ಸಾಗದು. ಆಸೆ ಆಕಾಂಕ್ಷೆಗಳ ಸರಣಿ ಬೇರೆಯಾಗಿದೆ ಮತ್ತು ವಿಧಿಯ ಆಟವೇ ಬೇರೆಯಾಗಿದೆ. ಮತ್ತು ಅದುವೇ ಸತ್ಯವಾಗಿದೆ. ನೆನಪಿಡಿರಿ ಅಲ್ಲಾಹನ ಬಳಿ ಮನುಷ್ಯನ ನಿಜವಾದ ದಿನಚರಿ ಇದೆ. ಅದರಲ್ಲಿ ಏನೇನು ಬರೆಯಲಾಗಿದೆ ಯಾರಿಗೆ ಗೊತ್ತು. ಆದುದರಿಂದ ಮನಸ್ಸನ್ನು ಜಾಗೃತಗೊಳಿಸುವತ್ತ ಗಮನ ಹರಿಸಬೇಕಾಗುತ್ತದೆ.

ಮುಂದುವರೆದು ಹೇಳುತ್ತಾರೆ. ವಿಷಾದದ ಸಂಗತಿ ಎಂದರೆ ಸಾಮಾನ್ಯವಾಗಿ ಆಪತ್ತುಗಳು ಬಂದರೂ ಜನರ ಮತ್ಸರ ಮತ್ತು ದುರಹಂಕಾರ ದೂರವಾಗಲಿಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಜನರು ತಮ್ಮ ಹಟ ಮತ್ತು ಆತಂಕಗಳನ್ನು ದೂರ ಮಾಡದೇ ಇದು ಸಾಧ್ಯವಾಗಲಿಕ್ಕಿಲ್ಲ. ನಾನು ನೋಡುತ್ತಿದ್ದೇನೆ. ಜನರು ಪೂರ್ಣ ರೀತಿಯಲ್ಲಿ ಅಲ್ಲಾಹನೊಡನೆ ಬೆರೆಯಲು ಸಿದ್ಧರಿಲ್ಲ. ಬರಗಾಲದ ಮಧ್ಯೆಯು ಜನರ ಭಾವನೆಗಳು ಬದಲಾಗಲಿಲ್ಲ. ಪ್ರಾರಂಭದಲ್ಲಿ ಮಕ್ಕಾ ಮದೀನದ ಫತ್ವಾಗಳಿಂದಲೂ ಭಯಪಡುತ್ತಿದ್ದರು. ಯಾರಾದರೂ ಮಕ್ಕದಿಂದ ಫತ್ವಾ ಹೊರಡಿಸಿದ್ದಾರೆ ಎಂದರೆ ಜನರು ಭಯಪಡುತ್ತಿದ್ದರು. ಆದರೆ ಈಗ ಈ ಆಪತ್ತುಗಳನ್ನು ನೋಡಿಯೂ ಭಯಪಡುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಜನರು ಪೂರ್ಣ ರೀತಿಯಲ್ಲಿ ಅಲ್ಲಾಹನೊಡನೆ ಮರಳುವವರೆಗೆ ಅವನ ವಿಧಿ ಬದಲಾಗುವುದಿಲ್ಲ. **ಇನ್ನಲ್ಲಾಹ ಲಾ ಯುಗೈಯಿರು ಮಾ ಬೊಖೌಮಿನ್ ಹತ್ತಾ ಯುಗೈಯಿರು ಮಾ ಬಿಅನ್‌ಫುಸಿಹಿಮ್. (ಅರ್‌ರಅದ್:12)**

**(ಮಲ್‌ಫೂಝಾತ್, ಸಂಪುಟ–1, ಪುಟ–129–131, ಮುದ್ರಣ ಖಾದಿಯಾನ್ 2018)**

**ಸದಖತುಲ್ ಫಿತರ್ ಪಾಲನೆ:**

ಅಲ್‌ಹಮ್‌ದುಲಿಲ್ಲಾಹ್! ಪವಿತ್ರ ರಮಝಾನ್ ಇದೇ ಏಪ್ರಿಲ್ ತಿಂಗಳಿನ ಅಂತಿಮ ವಾರದಲ್ಲಿ ಪ್ರಾರಂಭವಾಗಲಿದೆ. ಇಸ್ಲಾಮಿನಲ್ಲಿ **"ಫಿತ್ರಾನ"** ಕೊಡಲು ಒಂದು ಸಾಅ್ (ಅಂದರೆ ಸುಮಾರು 2 ಕೆಜಿ 750 ಗ್ರಾಂ ಸಮಾನ) ನಿಗದಿ ಪಡಿಸಲಾಗಿರುತ್ತದೆ. ಜಮಾಅತ್ ಬಾಂಧವರು ನಿಗದಿತ ದರ ಪ್ರಕಾರ ಪವಿತ್ರ ರಂಝಾನಿನ ಪ್ರಥಮ ಅಥವಾ ದ್ವಿತೀಯ ದಶಕದೊಳಗೆ **"ಸದಖತುಲ್ ಫಿತರ್"** ಪಾವತಿಸಲು ಪ್ರಯತ್ನ ಪಡಬೇಕಾಗಿದೆ. ಏಕೆಂದರೆ ಭಾರತದ ರಾಜ್ಯಗಳ ಧಾನ್ಯ (ಗೋದಿ, ಅಕ್ಕಿ) ಯ ನಿಗದಿತ ದರ ಮೌಲ್ಯ ವಿಭಿನ್ನ ರೀತಿಯದ್ದಾಗಿರುತ್ತದೆ. ಆದುದರಿಂದ ಸ್ಥಳೀಯ ನಿಗದಿತ ಮೌಲ್ಯ ದರದಂತೆ ನಿಗದಿಪಡಿಸಿದ ಪ್ರಕಾರ ಫಿತ್ರಾನ ಮೊತ್ತವನ್ನು ನೀಡಬೇಕು.

ಪಂಜಾಬಿನಲ್ಲಿ ಈ ವರ್ಷ ಸದಖತುಲ್ ಫಿತರ್ ಒಬ್ಬರಿಗೆ 55/– ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಸ್ಥಳೀಯ ಜಮಾಅತಿನಲ್ಲಿ ಅರ್ಹ ಬಡವಿದ್ದರಲ್ಲಿ ಸದಖತುಲ್ ಫಿತರ್‌ನ ಒಟ್ಟು ಮೊತ್ತದಲ್ಲಿ ಶೇ. 90ರ ವರೆಗೆ ಹಣವನ್ನು ಮಜ್ಲಿಸ್ ಆಮಿಲಾದ ನಿರ್ಣಯದ ಪ್ರಕಾರ ಹಂಚಬಹುದಾಗಿದೆ. ಉಳಿದ ಹಣ ಕೇಂದ್ರಕ್ಕೆ ಜಮಾ ಮಾಡಲು ಕಳುಹಿಸಬೇಕು. ಯಾವ ಜಮಾಅತಿನಲ್ಲಿ ಅರ್ಹ ಬಡವರು ಇರುವುದಿಲ್ಲವೋ ಅವರು ಜಮಾಅತಿನಲ್ಲಿ ವಸೂಲಾದ ಸಂಪೂರ್ಣ ಹಣವನ್ನು 'ಸದರ್ ಅಂಜುಮನ್ ಅಹ್ಮದಿಯಾ' ಖಾತೆಯಲ್ಲಿ ಕಳುಹಿಸತಕ್ಕದ್ದು. ನೆನಪಿರಲೀ! ಫಿತ್ರಾನದ ಹಣವನ್ನು ಮಸೀದಿಯ ಯಾವುದೇ ಅಗತ್ಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳಲು ಅನುಮತಿ ಇರುವುದಿಲ್ಲ.

**ಈದ್ ಫಂಡ್**

ಈ ಚಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಾಲದಿಂದ ಖಾಯಮ್ ಆಗಿರುತ್ತದೆ. ಈ ಫಂಡಿನ ಉದ್ದೇಶವೇನಾಗಿತ್ತೆಂದರೆ ಸಂತೋಷದ ಸಮಯಗಳಲ್ಲಿ ಮನುಷ್ಯ ತನ್ನ ಸ್ವಯಂ ಸಂತೃಪ್ತಿಗಾಗಿ, ಬಟ್ಟೆಗಳಿಗಾಗಿ, ಊಟೋಪಚಾರ, ಅತಿಥಿ ಸತ್ಕಾರ ಇತ್ಯಾದಿ ಹಲವು ವಿಧಗಳ ವೆಚ್ಚ ಮಾಡುತ್ತಾನೆ. ಇತರರಿಗೂ ಉಡುಗೊರೆ ಇತ್ಯಾದಿಗಳನ್ನು ನೀಡುತ್ತಾನೆ ಅದೇ ರೀತಿ ಈ ಸುಸಂದರ್ಭದಲ್ಲಿ ಧರ್ಮ ಕಾರ್ಯಗಳ ಬಗ್ಗೆಯು ಗಮನವಿರಬೇಕು. ಅಹ್ಮದಿ ಸದಸ್ಯರು ಬೈಅತ್ ಮಾಡುವಾಗಲೇ ಈ ಕರಾರು ಒಪ್ಪಿರುತ್ತಾರೆ. ಧರ್ಮವನ್ನು ಲೋಕದ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು ಎಂದು. ಆದುದರಿಂದ ಪ್ರತಿ ಅಹ್ಮದಿಯರಿಂದ ನಿರೀಕ್ಷಿಸಲಾಗಿರುವುದು ಏನೆಂದರೆ ಅವರು ಸಂತೋಷ ಸಂಭ್ರಮದ ಹಬ್ಬಗಳಲ್ಲಿ ಧರ್ಮಕಾರ್ಯಗಳ ಬಗ್ಗೆಯು ಲಕ್ಷ್ಯವಹಿಸುವರು. ಈ ಉದ್ದೇಶಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ತಮ್ಮ ಕಾಲದಲ್ಲಿ ಈ ಖಾತೆಗೆ ಪ್ರತಿಯೊಬ್ಬ ಆದಾಯವುಳ್ಳ ಅಹ್ಮದಿ ಒಬ್ಬರಿಗೆ ಒಂದು ರೂಪಾಯಿಯಂತೆ **"ಈದ್ ಫಂಡ್"** ಕೊಡಬೇಕು. ಇಂದು ಒಂದು ರೂಪಾಯಿಯ ಬೆಲೆ ಏನು ಉಳಿಯಲಿಲ್ಲ, ಆದುದರಿಂದ ಒಂದು ರೂಪಾಯಿಗೆ ಸೀಮಿತ ಪಡಿಸದೆ ನಿಮ್ಮ ಸಾಮರ್ಥ್ಯಾನುಸಾರವಾಗಿ ಕೊಡಬಹುದಾಗಿದೆ. ಒಂದು ಸಲಹೆ ಏನೆಂದರೆ ಹಬ್ಬದ ದಿವಸ ಸಾಮಾನ್ಯವಾಗಿ ಮಾಡಬಹುದಾದ ಖರ್ಚುವೆಚ್ಚದ ಅರ್ಧ ಭಾಗವನ್ನು ಈ ಖಾತೆಯಲ್ಲಿ ನೀಡಬಹುದಾಗಿದೆ. ಇದು ಕೇಂದ್ರೀಯ ಚಂದವಾಗಿರುತ್ತದೆ. ವಸೂಲಾದ ಸಂಪೂರ್ಣ ಮೊತ್ತವನ್ನು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಯಲ್ಲಿ ಜಮಾ ಮಾಡುವುದು ಅನಿವಾರ್ಯವಾಗಿರುತ್ತದೆ. ಇದರಿಂದ ಸ್ಥಳೀಯರಿಗೆ ಯಾವುದೇ ರೀತಿಯ ಖರ್ಚು ಮಾಡಲು ಅನುಮತಿ ಇರುವುದಿಲ್ಲ.

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ವಾಸಿಗಳಾಗಿದ್ದಾರೆ. ಇವರು ಮುಸ್ಲಿಂ ಯೂನಿಯನ್‌ನ ಮೊದಲ ಪ್ರೆಸಿಡೆಂಟ್ ಆಗಿದ್ದರು. ಇದೀಗ ವೈಸ್ ಪ್ರೆಸಿಡೆಂಟ್ ಆಗಿದ್ದಾರೆ.

ಅವರು ಹೇಳಿದರು. ನಾವು ಫ್ರಾನ್ಸ್ ಮುಸ್ಲಿಮರ ವತಿಯಿಂದ ಖಲೀಫತುಲ್ ಮಸೀಹ್‌ರವರಿಗೆ ಶುಭಾಶಯವನ್ನು ಕೋರುತ್ತೇವೆ. 2 ವರ್ಷ ಮುಂಚೆ ನಾನು ಮುಸ್ಲಿಂ ಯೂನಿಯನ್‌ನ ಅಧ್ಯಕ್ಷನಾಗಿದ್ದೆ. ಇದೀಗ ಉಪಾಧ್ಯಕ್ಷನಾಗಿದ್ದೇನೆ. ಹುಝೂರ್ ಅನ್ವರ್ ಕೇಳಿದಕ್ಕೆ ಅವರು ಹೇಳಿದರು. ಫ್ರಾನ್ಸ್‌ನ 60 ಮಿಲಿಯನ್ ಜನಸಂಖ್ಯೆಯಲ್ಲಿ 5 ಮಿಲಿಯನ್ ಮುಸ್ಲಿಮರಿದ್ದಾರೆ ಮತ್ತು ಈ ಸಮಯ ಫ್ರಾನ್ಸ್‌ನಲ್ಲಿ ಮುಸ್ಲಿಮರ 2,500 ಮಸೀದಿಗಳಿವೆ. ಇವೆಲ್ಲಾ ಫ್ರಾನ್ಸ್‌ನ ಮುಸ್ಲಿಂ ಕೌನ್ಸಿಲ್‌ನ ಅಡಿಯಲ್ಲಿ ರಿಜಿಸ್ಟ್ರರ್ ಮಾಡಲ್ಪಟ್ಟಿವೆ.

ಅವರು ಹೇಳಿದರು. ನಮಗೆ ಇಮಾಮರ ಅಗತ್ಯವಿದೆ. ನಾವು ಇಮಾಮರಿಗೆ ಫ್ರೆಂಚ್ ಕಲಿಸ ಬಯಸುತ್ತೆನೆ. ಇದು ನಮಗೆ ಒಂದು ಸಮಸ್ಯೆ ಆಗಿ ಬಿಟ್ಟಿದೆ. ಹುಝೂರ್ ಅನ್ವರ್ ಹೇಳಿದರು. ಬಹುಶಃ 1926 ರಲ್ಲಿ ಪ್ಯಾರಿಸ್‌ನಲ್ಲಿ ಒಂದು ಮಸೀದಿ ನಿರ್ಮಾಣವಾಗಿತ್ತು. ಅದು ದೊಡ್ಡ ಮಸೀದಿಯಾಗಿತ್ತು ಮತ್ತು ಇಲ್ಲಿಯ ಪ್ರಥಮ ಮಸೀದಿಯಾಗಿತ್ತು. ಹುಝೂರ್ ಅನ್ವರ್ ಕೇಳಿದರು. ನೀವು ತಮ್ಮ ಇಮಾಮರಿಗೆ ಹೇಗೆ ತರಬೇತಿ ನೀಡುತ್ತೀರಿ?

ಆಗ ಅವರು ಹೇಳಿದರು. ನಮ್ಮಲ್ಲಿ 8 ಸಂಸ್ಥೆಗಳಿವೆ. ಅವರು ಇಮಾಮರ ತರಬೇತಿ ನೀಡುತ್ತಾರೆ. ಒಂದು ವರ್ಷದಲ್ಲಿ ಅವರಿಗೆ 150 ಇಮಾಮರಿಗೆ ತರಬೇತಿ ನೀಡಬೇಕಾಗಿರುತ್ತದೆ. ನಮಗೆ ಪ್ರತಿವರ್ಷ 150 ಇಮಾಮ್‌ಗಳು ಅವಶ್ಯಕತೆ ಇರುತ್ತದೆ. 200 ರಿಂದ 300 ಮಸೀದಿಗಳ ನಿರ್ವಹಣೆ ಕಾರ್ಯವು ನಮ್ಮ ಯೋಜನೆಯಲ್ಲಿದೆ.

ಹುಝೂರ್ ಕೇಳಿದರು: ನಿಮಗೆ ಮಸೀದಿಗಳ ಪ್ರಕಾರ 2500 ಇಮಾಮ್‌ಗಳು ಬೇಕಾಗಿದ್ದಾರೆ ಏನು ನಿಮ್ಮ ಬಳಿ ಇಷ್ಟು ಸಂಖ್ಯೆಯಲ್ಲಿ ಇಮಾಮ್‌ಗಳಿಲ್ಲವೆ? ಇದಕ್ಕೆ ಅವರು ಹೇಳಿದರು. ನಮ್ಮಲಿ ಫುಲ್ ಟೈಮ್ ಇಮಾಮರು ಇರುವುದಿಲ್ಲ. ಕೂಲಿಯ ಅನುಸಾರ ಇರುತ್ತಾರೆ. ಇಮಾಮರಾಗುತ್ತಾರೆ ಸ್ವಲ್ಪ ಸಮಯ ಕೆಲಸ ಮಾಡುತ್ತಾರೆ ಮತ್ತು ಹೊರಟುಹೋಗುತ್ತಾರೆ. ಅವರ ಟ್ರೈನಿಂಗ್ ಸಹ ಸರಿಯಾದ ರೀತಿಯಲ್ಲಿ ಆಗುವುದಿಲ್ಲ. ನಾವು 3.4 ವರ್ಷ ತರಬೇತಿಯ ಅವಧಿಯನ್ನು ನಿಯೋಜಿಸಿದ್ದೇವೆ. ಅರ್ಧದಲ್ಲಿಯೇ ಹೋಗಿ ಬಿಡುತ್ತಾರೆ. ಕೆಲವೇ ಕೆಲವು ಜನರು ತಮ್ಮ ತರಬೇತಿಯನ್ನು ಪೂರ್ಣಗೊಳಿಸುತ್ತಾರೆ. ಹೆಚ್ಚಿನವರು 2 ವರ್ಷಗಳಲ್ಲಿಯೇ ಹೊರಗೆ ಬಂದು ಬಿಡುತ್ತಾರೆ.

ಅವರು ಹೇಳಿದರು. ನಾವು ಈ ಕೊರತೆಯನ್ನು ನಿರ್ವಹಿಸಲು ಅಲ್ಜೀರಿಯಾ, ಮರಾಕಾಶ್ ಮತ್ತು ತುಬರ್ಕಿಯಿಂದ ಇಮಾಮರನ್ನು ಕರೆಯಿಸಿಕೊಳ್ಳುತ್ತೇವೆ. ಅವರಿಗೆ ಸರ್ಕಾರ ಇರುವ 4 ವರ್ಷಗಳ ವರ್ಕ್ ಪರ್ಮೀಟ್ ಸಿಗುತ್ತದೆ. ಮತ್ತೆ ಅವರಿಗೆ ಹಿಂತಿರುಗಬೇಕಾಗುತ್ತದೆ.

ಅವರು ಹೇಳಿದರು. ಫ್ರಾನ್ಸ್ ಆಕ್ರಮಣದ ನಂತರ ಇಸ್ಲಾಮೋ ಫೋಬಿಯಾ ಹೆಚ್ಚಾಗಿದೆ.

ಆಗ ಹುಝೂರ್ ಅನ್ವರ್ ಹೇಳಿದರು. ಹಾಗಾದರೆ ಅದರ ರದ್ಧತಿಗಾಗಿ ನೀವು ಏನು ಪ್ರಯತ್ನ ಮಾಡಿದ್ದೀರಿ.

ಆಗ ವೈಸ್ ಪ್ರೆಸಿಡೆಂಟ್‌ರವರು ಉತ್ತರ ನೀಡಿದರು. ನಾವು ಪ್ರಯತ್ನ ಪಟ್ಟು ಅವರಿಗೆ ಹೇಳುತ್ತೇವೆ. ಇದಕ್ಕೆ ಇಸ್ಲಾಂ ಧರ್ಮದೊಂದಿಗೆ ಯಾವ ಸಂಬಂಧವು ಇಲ್ಲ. ಇಸ್ಲಾಂ ಧರ್ಮವು ಉಗ್ರವಾದಕ್ಕೆ ವಿರುದ್ಧವಾಗಿದೆ. ನಾವು ಅವರಿಗೆ ಇಸ್ಲಾಂ ಧರ್ಮದ ಒಳ್ಳೆಯ ಶಿಕ್ಷಣವನ್ನು ತೋರಿಸುತ್ತೇವೆ.

ಹುಝೂರ್ ಅನ್ವರ್‌ರ ಪ್ರಶ್ನೆ ಜಿಹಾದ್ ಬಗ್ಗೆ ಏನು ಹೇಳುತ್ತೀರಿ? ಅವರು ಹೇಳಿದರು. ಮೊದಲನೆಯ ಜಿಹಾದ್ ಆತ್ಮ ಸಂಬಂಧಿ ಜಿಹಾದ್ ಆಗಿದೆ.

ಆಗ ಹುಝೂರ್ ಅನ್ವರ್(ಅಬಿಅ) ಹೇಳಿದರು. ತಾವು ಬಂದ ಮೇಲೆ ದೃಡತೆ ಸಾಧಿಸಿರಿ ಮತ್ತು ಇತರ ಮುಸ್ಲಿಮರಿಗೂ ಇದೇ ಮಾರ್ಗದಲ್ಲಿ ದೃಡ ಪಡುವಂತೆ ಪ್ರಯತ್ನಿಸಿರಿ. ಆಗ ಮುಸ್ಲೀಮರೆಡೆಯಲ್ಲಿ ಜಿಹಾದಿನ ಕುರಿತು ಹೊಂದಿದ ತಪ್ಪು ಅಭಿಪ್ರಾಯವು ದೂರವಾಗುವುದು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಇಂದಿನದು ಲಾಬಿಂಗ್ ಕಾಲವಾಗಿದೆ. ತಾವು ಲಾಬಿಂಗ್ ಮಾಡುವ ಪ್ರಯತ್ನ ಏಕೆ ಮಾಡುವುದಿಲ್ಲ ಆ ಜನರಿಗೆ ಜಿಹಾದಿನ ನಿಜವಾದ ಶಿಕ್ಷಣವನ್ನು ನೀಡಿರಿ. ಅವರ ಮೆದುಳನ್ನು ಸ್ವಚ್ಛಗೊಳಿಸಿರಿ. ಇಸ್ಲಾಮ್ ಫೋಬಿಯಾ ದೂರವಾಗುವುದು. ಇಸ್ಲಾಮಿನಲ್ಲಿ ಒಂದೆರಡು ಪಂಥಗಳಲ್ಲ 72 ಪಂಥಗಳಿವೆ. ನಮ್ಮನ್ನು ಸೇರಿಸಿ 73 ಆಗುವುವು. ಪ್ರತಿಯೊಂದು ಪಂಥವು ಒಬ್ಬರು ಇನ್ನೊಬ್ಬರ ಮೇಲೆ ಆರೋಪವನ್ನು ಹಚ್ಚುತ್ತಾರೆ. ಮೊದಲು ಎಲ್ಲಾ ಪಂಥಗಳು ಒಂದಾಗಬೇಕು ಮತ್ತು ಐಕ್ಯತೆ ಸಾಧಿಸಬೇಕು. ಆಗ ಒಂದು ಒಳ್ಳೆಯ ಪ್ರಭಾವ ಜಗತ್ತಿನ ಮೇಲೆ ತೋರಿಸಬಹುದು.

ಸುನ್ನಿ ಮುಸಲ್ಮಾನರಲ್ಲಿ ಹೆಚ್ಚಿನವರು ಇಮಾಮ ಅಬು ಹನೀಫ ಅವರನ್ನು ನಂಬುವವರಾಗಿದ್ದಾರೆ. ಅಹ್ಮದಿಯಾ ಜಮಾಅತಿನ ಹೆಚ್ಚಿನ ಫಿಖ್ಹೆಯಿ ಸಮಸ್ಯೆಗಳು ಇಲ್ಲ ಇಮಾಮ್ ಅಬು ಹನೀಫರ ಫಿಖಾವನ್ನೇ ಅವಲಂಬಿಸಿವೆ. ನಾವು ಹಝ್ರತ್ ರಸೂಲುಲ್ಲಾಹ್(ಸ) ರವರು ಖಾತಮುನ್ನಬೀಯ್ಯೀನ್ ಎಂಬ ವಿಶ್ವಾಸ ಹೊಂದಿದವರಾಗಿದ್ದೇವೆ. ಅವರ ನಂತರ ಯಾವ ಹೊಸ ಶರಿಹತ್ತನ್ನು ಬರುವುದಿಲ್ಲ. ನಾವು ಪವಿತ್ರ ಖುರ್‌ಆನ್ ಅಂತಿಮ ಶರಿಅತ್ ಎಂದು ನಂಬಿದ್ದೇವೆ. ಅನಂತರ ಯಾವ ಶರಿಅತ್ ಸಹ ಇಲ್ಲ ಹಝ್ರತ್ ರಸೂಲುಲ್ಲಾಹ್(ಸ) ತೋರಿಸಿದ ಮಾರ್ಗ (ಸುನ್ನತ್) ಅನ್ವಯವೇ ನಾವು ನಮ್ಮ ಜೀವನವನ್ನು ಕಳೆಯುತ್ತೇವೆ.

ನಾವು ರಸೂಲುಲ್ಲಾಹ್(ಸ) ರ ಸುನ್ನತ್, ಎಲ್ಲಾ ಹದೀಸುಗಳ ಮೇಲೆ, ಅವು ಪವಿತ್ರ ಖುರ್‌ಆನಿನ ವಿರುದ್ಧವಾಗಿ ಇರದಿದ್ದರೆ ನಾವು ನಂಬುತ್ತೇವೆ. ಯಾವ ಹದೀಸುಗಳು ಪವಿತ್ರ ಖುರ್‌ಆನಿಗೆ ವಿರುದ್ಧವಾಗಿರುತ್ತದೆಯೋ ಅದನ್ನು ತಪ್ಪೆಂದು ಭಾವಿಸುತ್ತೇವೆ. ಎಲ್ಲ ಮುಸಲ್ಮಾನರು ಅಂತಿಮ ಕಾಲದಲ್ಲಿ ಮಹದಿ ಹಾಗೂ ಮಸೀಹರು ಬರುವರೆಂದು ನಂಬುತ್ತಾರೆ. ನಾವು ಹೇಳುವುದು ಯಾವ ಮಸೀಹರು ಹಝ್ರತ್ ಮೂಸಾ(ಅ) ರವರ ಜಿಹದಿನ ಅಡಿಯಲ್ಲಿ ಬಂದಿದ್ದರೋ ಅವರು ಜೀವಿಸಿಲ್ಲ. ಅವರು ಮರಣ ಹೊಂದಿದ್ದಾರೆ. 2000 ವರ್ಷದವರೆಗೆ ಯಾವ ವ್ಯಕ್ತಿಯೂ ಬದುಕಿರಲು ಸಾಧ್ಯವಿಲ್ಲ.

ಯಾವ ಮಸೀಹರು ಈ ಅಂತಿಮ ಕಾಲದಲ್ಲಿ ಬರಲಿಕ್ಕಿತ್ತೋ ಸಹಿ ಬುಖಾರಿ ಹದೀಸಿನ ಪ್ರಕಾರ ಹಝ್ರತ್ ರಸೂಲುಲ್ಲಾಹ್(ಸ) ರ ಉಮ್ಮತಿನಲ್ಲಿಯೇ ಬರುವುದಿತ್ತು. ಎಲ್ಲಾ ಮುಸ್ಲಿಮರು ಮಸೀಹ್ ಹಾಗೂ ಮಹದಿ ಬರುವರೆಂದು ವಿಶ್ವಾಸ ಇಟ್ಟಿದ್ದಾರೆ. ಮಸೀಹರು ಆಕಾಶದಿಂದ ಬರುವರು ಮತ್ತು ಮಹದಿಯೊಂದಿಗೆ ಸೇರಿ ಕಾರ್ಯನಿರ್ವಹಿಸುವರು. ಆದರೆ ನಾವು ಹೇಳುವುದು ಇಬ್ಬರು ಒಂದೇ ವ್ಯಕ್ತಿಯಾಗಿದ್ದಾರೆ ಮತ್ತು ಬರಲಿಕ್ಕಿರುವುದು ಒಬ್ಬರೇ ಆಗಿದ್ದಾರೆ. ಇತರ ಮುಸ್ಲಿಮರಿಗೂ ಮತ್ತು ನಮಗೆ ಇರುವ ಒಂದೇ ವ್ಯತ್ಯಾಸ ಇದೇ ಆಗಿದೆ. ಉಳಿದದ್ದು ಖತಮೆ ನಬುವತ್ (ಪ್ರವಾದಿತ್ವ ಸಮಾಪ್ತಿ) ಅಂತಿಮ ನಬಿ, ಅಂತಿಮ ಶರಿಹತ್ ಎಲ್ಲದರಲ್ಲೂ ವಿಶ್ವಾಸವಿಡುತ್ತಾರೆ.

ಆಗ ಅವರು ಹೇಳಿದರು. ನಾನು ತುಂಬಾ ಸಂತುಷ್ಟನಾಗಿದ್ದೇನೆ. ಮರಾಶಿನ್ ವಾಸಿಯಗಿದ್ದೇನೆ. ಮಾಲಿಕಿ ಪಂಗಡದಿಂದ ನನ್ನ ಸಂಬಂಧವಿದೆ. ಮಾಲಿಕಿ, ಅನಫಿ, ಶಾಫಿ ಎಲ್ಲರೂ ಮುಸಲ್ಮಾನರಾಗಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ರ ಪ್ರಕಾರ ಯಾವ ವ್ಯಕ್ತಿ **ಲಾ ಇಲಾಹ ಇಲ್ಲಲ್ಲಾ ಮುಹಮ್ಮದು ರಸೂಲುಲ್ಲಾ** ಉಚ್ಚರಿಸುವನೋ ಅವನು ಮುಸಲ್ಮಾನನಾಗಿದ್ದಾನೆ. ನಾವು ಯಾರ ಮೇಲೂ ಫತ್ವ ಹಚ್ಚುವುದಿಲ್ಲ. ಪವಿತ್ರ ಖುರ್‌ಆನ್ ಹೇಳುತ್ತದೆ. ಯಾರು ನಿಮಗೆ ಸಲಾಂ ಹೇಳುವರು ಅವರ ಮಾತನ್ನು ಕೇಳಿರಿ. ಅವರಿಗೆ ನೀನು ಮೂಮಿನ್ ಅಲ್ಲ ಎಂದು ಹೇಳಬೇಡಿರಿ.

ಕೊನೆಯಲ್ಲಿ ಹುಝೂರ್ ಅನ್ವರ್ ಹೇಳಿದರು. ನಿಮಗೆಲ್ಲರಿಗೂ ತುಂಬಾ ಧನ್ಯವಾದಗಳು. ನೀವು ಭೇಟಿಯಾಗಲು ಇಲ್ಲಿಯವರೆಗೆ ಬಂದಿದ್ದೀರಿ. ಭೇಟಿಯ ಈ ಕಾರ್ಯಕ್ರಮವು 5:00 ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಅತಿಥಿಗಳು ಭಾವಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು.

**ಮೂವರು ಪ್ರಮುಖ ವ್ಯಕ್ತಿಗಳ ಹುಝೂರ್ ಅನ್ವರ್‌ರೊಡನೆ ಭೇಟಿ:**

ಅನಂತರ ಕೆಳಗೆ ನಮೂದಿಸಿದ 3 ಅತಿಥಿಗಳು ಹುಝೂರ್ ಅನ್ವರ್‌ರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

ಮೊದಲನೆಯವರು Volerie Thorin ಸಾಹಿಬ (ಅವರು ಪ್ರೋಟೆಸ್ಟೆಂಟ್ ಜರ್ನಲಿಸ್ಟ್ ಆಗಿರುವರು ಹಾಗೂ ಆಫ್ರಿಕನ್ ಇನ್ಸ್‌ಟಿಟ್ಯೂಟ್ ಮೇಲೆ ವಿಶೇಷಜ್ಞ (specialize) ಮಾಡಿರುವರು. ಅವರ ಒಂದು ಪ್ರೋಟೆಸ್ಟೆಂಟ್ ರೇಡಿಯೋ ಸಹ ಇದೆ. ಅದರಲ್ಲಿ ಒರ್ವ ಅಹ್ಮದಿ ಮಿತ್ರರಾದ Saint Adive ಸಾಹಿಬರವರು ಜಮಾಅತಿನ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಾರೆ).

ಎರಡನೆಯವರು Florence Tawbmann ಸಾಹೇಬರು (ಅವರು Evangetiend ಚರ್ಚಿನ ಫಾಧರಿಯಾಗಿರುವರು. ಮತ್ತು ಕ್ರಿಶ್ಚಿಯನ್ ಜೀವಿಸ್ ಫ್ರೆಂಡ್‌ಶಿಪ್ ಕಮಿಟಿಯ ಅಧ್ಯಕ್ಷರು ಆಗಿರುವವರು)

ಮೂರನೆಯವರು Alfanssina Bellio ಸಾಹಿಬ (ಅವರು Sociologist ಆಗಿರುವರು ಮತ್ತು ಒಂದು ವಿಶೇಷವಾದ Religious laboratory of research ಗೆ ಸಂಬಂಧಿಸಿದವರಾಗಿದ್ದಾರೆ). ಇವರೆಲ್ಲರೂ ಸರತಿಯಂತೆ ಹುಝೂರ್(ಅಬಿಅ) ರವರಿಗೆ ತಮ್ಮ ಪರಿಚಯವನ್ನು ಮಾಡಿಕೊಟ್ಟರು.

Alfonsina Bellio ಸಾಹೇಬ ಹೇಳಿದರು. ನಾನು ಜಲ್‌ಸಾ ಸಾಲಾನ ಫ್ರಾನ್ಸ್‌ನಲ್ಲಿ ಭಾಗವಹಿಸಿದ್ದೆ. ಆ ಜಲ್ಸವು ನನ್ನ ಜೀವನದ ಒಂದು ಐತಿಹಾಸಿಕ ಸಂದರ್ಭವಾಗಿದೆ. ಜಲ್ಸದಲ್ಲಿ ಹುಝೂರ್(ಅಬಿಅ) ಫ್ರಾನ್ಸ್‌ಫೋನ್ ಅತಿಥಿಗಳೊಂದಿಗೆ ಸಂಬೋಧಿಸಿದರು. ಇದು ನಮ್ಮ ದೇಶಕ್ಕಾಗಿಯೂ ಒಂದು ಐತಿಹಾಸಿಕ ದಿನವಾಗಿತ್ತು.

ಅವರು ಹೇಳಿದರು. ನಾನು ಪ್ಯಾರಿಸ್‌ನಲ್ಲಿರುತ್ತೇನೆ. ಆದರೆ ನನ್ನ ಸಂಬಂಧ ಇಟಲಿಯೊಂದಿಗೆ ಇದೆ. ಬೆಲೆ ಏರಿಕೆಯ ಸಂಬಂಧವಾಗಿ ಮಾತು ಬಂದಾಗ 2 ದೇಶಗಳಲ್ಲಿ ಹೆಚ್ಚು ಬೆಲೆ ಏರಿಕೆಯಾಗಿದೆ. ಆಗ ಅವರು ಹೇಳಿದರು. ರೋಮಿನಲ್ಲಿಯೂ ಬೆಲೆ ಏರಿಕೆ ಇದೆ. ಆದರೆ ಪ್ಯಾರಿಸ್‌ನಲ್ಲಿ ಇನ್ನೂ ಹೆಚ್ಚು.

ಮಲೋಗನ್ಸ್ ಜುರ್ಬುನ್ ಸಾಹೇಬ ಹೇಳಿದರು. ನಾನು ಪ್ರೊಟೆಸ್ಟೆಂಟ್ ಆಗಿದ್ದೇನೆ. ನಮ್ಮ ಚರ್ಚ್‌ನಲ್ಲಿ ಅರ್ಧ ಮಿಲಿಯನ್ ಜನರಿದ್ದಾರೆ. ಆವರು ಧರ್ಮದಿಂದ ದೂರ ಹೋಗುತ್ತಿದ್ದಾರೆ.

ಆಗ ಹುಝೂರ್(ಅಬಿಅ) ಹೇಳಿದರು. ಇಂದಿನ ಲೋಕದಲ್ಲಿ ಜನರಿಗೆ ಧರ್ಮದ ಪರಿವೇ ಇಲ್ಲ. ಇಂಟರ್‌ಫೇತ್ ಡೈಲೋಗ್ ಅವಶ್ಯಕವಾಗಿದೆ. ಅದರಲ್ಲಿ ಧರ್ಮೇತರ ಜನರನ್ನು ಆಹ್ವಾನಿಸಬೇಕಾಗಿದೆ. ಇನ್ನೊಬ್ಬರ ಧರ್ಮದ ಕೆಡಕುಗಳನ್ನು ಹೇಳುವ ಬದಲಿಗೆ ತಮ್ಮ ಧರ್ಮದ ಒಳ್ಳೆಯತನವನ್ನು ವಿವರಿಸಬೇಕು. ಮತ್ತು ಸಮಾಜದಲ್ಲಿ ಎಲ್ಲರೂ ಪರಸ್ಪರ ಪ್ರೀತಿಯಿಂದ ವಾಸಿಸಬೇಕೆಂದು ಹೇಳಬೇಕಾಗಿದೆ. ನಾವೆಲ್ಲರೂ ಒಂದೇ ಸಮಾಜದಲ್ಲಿ ಇರುವವರಾಗಿದ್ದೇವೆ.

ಹುಝೂರ್(ಅಬಿಅ) ಹೇಳಿದರು. ಈ ಸಮಯ ಅವಶ್ಯವಾಗಿರುವುದು ಸಮಾಜದ ಜನರನ್ನು, ದೈವವನ್ನು ಗುರುತಿಸುವಂತೆ ಮಾಡಬೇಕು. ಇದಕ್ಕಾಗಿ ತುಂಬಾ ಸಮಯ ನೀಡಬೇಕು. ಎಲ್ಲರಿಗೂ ಒಬ್ಬ ದೇವನಿದ್ದಾನೆ ಎಂಬ ಅರಿವು ಮೂಡಿಸಬೇಕು. ಪ್ರತಿಯೊಬ್ಬನಿಗೆ ತನ್ನದೇ ಆದ ಧರ್ಮವಿದೆ. ಆದರೆ ಏಕದೇವನನ್ನು ಗುರುತಿಸುವುದು ಪ್ರಾಥಮಿಕ ಅವಶ್ಯಕವಾಗಿದೆ.

Valerine Train ಸಾಹೇಬ ಹೇಳಿದರು. ನಾವು ಒಂದು ರೇಡಿಯೋ ಪ್ರೋಗ್ರಾಂ ಪ್ರತಿ 2 ವಾರದ ನಂತರ (ಭಾನುವಾರ) ಹಮ್ಮಿಕೊಳ್ಳುತ್ತೇವೆ. 4,00,000 ಜನರು ಕೇಳುತ್ತಾರೆ. ಇದು ಧರ್ಮದ ಕುರಿತೇ ಆಗಿರುತ್ತದೆ. ಪೂರ್ವದ ಒಬ್ಬರು ಕ್ರೈಸ್ತ, ಒಬ್ಬರು ಯಹೂದಿ ಹಾಗೂ ಒಬ್ಬರು ಅಹ್ಮದಿಯನ್ನು ಇಸ್ಲಾಮ್ ಧರ್ಮವನ್ನು ಪ್ರತಿನಿಧಿಸಲು ನೇಮಿಸಿದೆವು. ಅವರ ಹೆಸರು ಸಯ್ಯದ್ ಅಬೀಬಿ.

ಆಗ ಹುಝೂರ್(ಅಬಿಅ) ಕೇಳಿದರು. ಇಸ್ಲಾಮ್ ಮತ್ತು ಮುಸ್ಲಿಮರ ಬಗ್ಗೆ ಜನರ ಅಭಿಪ್ರಾಯವೇನು?

ಅವರು ಉತ್ತರ ನೀಡಿದರು. ಇನ್ನೂ ಸಹ ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ಮುಸ್ಲಿಮರ ಬಗ್ಗೆ ತಿಳುವಳಿಕೆ ಇಲ್ಲ. ಒಬ್ಬ ಅಹ್ಮದಿಯನ್ನು ನೇಮಿಸಿದ ನಂತರ ನಮ್ಮ ಕೇಳುಗರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಜನರಿಗೆ ಇಸ್ಲಾಮಿನ ವಾಸ್ತವಿಕತೆಯ ಕುರಿತು ಅರಿವು ಮೂಡುತ್ತಿದೆ. ಅವರ ಅಭಿಪ್ರಾಯಗಳು ಸಕರಾತ್ಮಕವಾಗಿದೆ.

ಹುಝೂರ್(ಅಬಿಅ) ಹೇಳಿದರು. ವಾಸ್ತವದಲ್ಲಿ ಇಸ್ಲಾಮ್ ಪದದ ಅರ್ಥವೇ ಶಾಂತಿ ಎಂದಾಗಿದೆ.

**12 ಅಕ್ಟೋಬರ್ 2019 (ಶನಿವಾರ)**

**ಒಂದು ಸ್ಥಳೀಯ ಪತ್ರಿಕೆ ಪ್ರಕಟಿಸಿದ ವರದಿ**

ಇಲ್ಲಿಯ ಒಂದು ಸ್ಥಳೀಯ ಪತ್ರಿಕೆ "DNA" (ಇದು ರಾಜ್ಯದ ಮುಖ್ಯ ದಿನ ಪತ್ರಿಕೆಯಾಗಿರುತ್ತದೆ. ಇದರ ಪ್ರಕಟಣೆ ಒಂದು ಲಕ್ಷ ಐವತ್ತು ಸಾವಿರದಷ್ಟಿದೆ) ಮಸೀದಿಯ ಉದ್ಘಾಟನಾ ಸಮಾರಂಭ ಕುರಿತು ಸುದ್ದಿ ಪ್ರಸಾರ ಮಾಡುತ್ತ ಹೀಗೆ ಬರೆದಿದೆ: ಬೆಳೆಗಳ ಮಧ್ಯೆ ಒಂದು ಮಸೀದಿ "ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ" ಎಂದು ಕರೆ ನೀಡುತ್ತಿದೆ. ಮೂರು ವರ್ಷಗಳ ನಿರ್ಮಾಣ ಕಾರ್ಯಗಳ ನಂತರ ಊರಿನ ಒಂದು ಭಾಗದ ಅಹ್ಮದಿಯಾ ಜಮಾಅತ್ತಿನ ಜನರು ಈಗ Hurigheim ನಲ್ಲಿ ನಿರ್ಮಿಸಲಾದ ಆ ಹೊಸ ಮಸೀದಿಯಲ್ಲಿ ನಮಾಝ್ ನಿರ್ವಹಿಸುವರು. ಇದು Koochamsberg ನ ಪ್ರಥಮ ಮಸೀದಿಯಾಗಿದೆ. ಮಸೀದಿಯ ಉದ್ಘಾಟನೆಯು ನಿಸ್ಸಂದೇಹವಾಗಿ ಒಂದು ಐತಿಹಾಸಿಕ ಕ್ಷಣವಾಗಿದೆ.

ಈ ಊರಿನಲ್ಲಿ (Hurtigheim) ಪ್ರವೇಶ ಮಾಡುತ್ತಲೇ ಮೆಕ್ಕೆ ಜೋಳದ ಹೊಲಗಳ ಮಧ್ಯೆ ಒಂದು ಸುಂದರವಾದ ಮಸೀದಿಯನ್ನು ನಿರ್ಮಿಸುವ ಭಾಗ್ಯ ಅಹ್ಮದಿಯಾ ಜಮಾಅತಿಗೆ ಲಭಿಸಿದೆ. ಸುಮಾರು 130ರ ಸಮೀಪ ಅಹ್ಮದಿಯರು ಈ ಸ್ಟ್ರಾಬರ್ಗ್ ಜಮಾಅತ್ತಿನ ನಿವಾಸಿಯಾಗಿದ್ದಾರೆ. ಮೊದಲು ಯಾರೊ ಒಬ್ಬರ ಮನೆಯಲ್ಲಿ ನಮಾಝುಗಳನ್ನು ನಿರ್ವಹಿಸುತ್ತಿದ್ದರು. ಈಗ ಈ ಮಸೀದಿಯಲ್ಲಿ ಬಂದು ನಮಾಝು ನಿರ್ವಹಿಸುವರು. ಲೋಕದ ವಿವಿಧ ದೇಶಗಳ ವಿಶೇಷವಾಗಿ ಅಲ್ ಜಝಾಯಿರ್ ಮತ್ತು ಪಾಕಿಸ್ತಾನದಲ್ಲಿ ದೌರ್ಜನ್ಯಗಳಿಗೆ ಗುರಿಯಾದ ಈ ಜಮಾಅತ್ ತುಂಬಾ ಜಾಗ್ರತೆಯಿಂದ ಇರುತ್ತಾರೆ.

2 route Des Momains hurtigheim ನಲ್ಲಿ ಜಮಾಅತ್ ತನ್ನ ಪ್ರಥಮ ಮಸೀದಿ ಹಾಗೂ ಫ್ರಾನ್ಸ್‌ನ ದ್ವಿತೀಯ ಮಸೀದಿಯನ್ನಾಗಿ ನಿರ್ಮಿಸಿದೆ. ಪ್ರಥಮ ಮಸೀದಿ Sairt prix ನಲ್ಲಿದೆ. ಮತ್ತು ಒಂದು ಮೂರನೆಯ ಮಸೀದಿಯ ನಿರ್ಮಾಣ ಹಂತದಲ್ಲಿದೆ. ಅದು Bouraga ನಲ್ಲಿದೆ.

ಅಶ್ಫಾಖ್ ರಬ್ಬಾನಿ ಸಾಹಿಬ್ ಅಮೀರ್ ಜಮಾಅತ್ ಅಹ್ಮದಿಯಾ ಫ್ರಾನ್ಸ್ ಅವರ ಹೇಳಿಕೆಯ ಪ್ರಕಾರ ನಾವು ಇಲ್ಲಿ ಹಲವು ಸ್ಥಳಗಳನ್ನು ನೋಡಿದೆವು ಮತ್ತು ಖರೀದಿ ಮಾಡುವ ಹಂತಕ್ಕೆ ತಲುಪಿದ್ದೆವು. ಅಷ್ಟರಲ್ಲಿ ಇಲ್ಲಿಯ ಮೇಯರ್ ನಮಗೆ ಸ್ವಾಗತಿಸಿದರು ಮತ್ತು ಅನುಮತಿ ಕೊಟ್ಟರು.

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಹೇಳಿದರು. ನಾನು ಜಮಾಅತ್ ಬಾಂಧವರ ಅಗತ್ಯಕ್ಕೆ ಅನುಗುಣವಾಗಿ ಮತ್ತು ಸಂಖ್ಯೆಯ ಅನುಗುಣವಾಗಿ ಮಸೀದಿಯನ್ನು ನಿರ್ಮಿಸುತ್ತೇನೆ. ಇಲ್ಲಿ 5 ವಿವಿಧ ದೇಶಗಳ ಅಹ್ಮದಿಯರು ನೆಲೆಸಿದ್ದಾರೆ. ಸಂಖ್ಯೆಯು ಹೆಚ್ಚುತ್ತಿದೆ ಹಾಗೂ ನಮಗೆ ಇಲ್ಲಿ ಮಸೀದಿಯ ಅವಶ್ಯಕತೆ ಇತ್ತು. ಸುಮಾರು 6 ಲಕ್ಷ ಯುರೋ ನಿರ್ಮಾಣ ವೆಚ್ಚ ತಗುಲಿದೆ. ಅವೆಲ್ಲ ಜಮಾಅತ್ ಬಾಂಧವರೇ ನಿರ್ವಹಿಸಿರುತ್ತಾರೆ. ನಮಾಝ್ ಸಭಾಂಗಣವು 154 ಚ.ಮಿ. ಇದೆ. ಅದರಲ್ಲಿ 250 ಜನರು ಸೇರಬಹುದಾಗಿದೆ. ಎರಡು ಕಚೇರಿಗಳಿವೆ (Office), ಒಂದು ಗ್ರಂಥಾಲಯವಿದೆ. ಮತ್ತು ಒಂದು ಸಣ್ಣದಾದ Reception ಹಾಲ್ ಇದೆ. 50 ವಾಹನಗಳನ್ನು ನಿಲುಗಡೆ ಮಾಡಬಹುದಾಗಿದೆ. ಅದಕ್ಕೆ ಹೊಂದಿಕೊಂಡೆ ಒಂದು ಮನೆ ಇದೆ. ಅದು ಮುರಬ್ಬಿಯರ ವಸತಿ ನಿಲಯವಾಗಿದೆ.

ಅಶ್ಫಕ್ ರಬ್ಬಾನಿ ಸಾಹಿಬ್ ಅಮೀರ್ ಜಮಾಅತ್ ಅಹ್ಮದಿಯಾ ಫ್ರಾನ್ಸ್ ಹೇಳುತ್ತಾರೆ. ಇದೊಂದು ಸಾರ್ವಜನಿಕ ಮಸೀದಿಯಾಗಿದೆ. ಮೇಯರ್ ಅವರ ಆಶಯದಂತೆಯೇ ನಿರ್ಮಿಸಲಾಗಿದೆ. ಪರಿಸರದ ಬಗ್ಗೆಯೂ ಕಾಳಜಿ ವಹಿಸಲಾಗಿದೆ ಮತ್ತು ನಿರ್ಮಾಣ ಕಾರ್ಯವು ಸ್ಥಳೀಯ ರೀತಿಯಲ್ಲಿಯೇ ನಡೆದಿದೆ.

Hertgriem mayor ಹೇಳಿದರು. ಹಲವು ಜನರು, ನಾನು ನಿಮ್ಮ ಬಗ್ಗೆ ವಹಿಸಿದ ಭರವಸೆಯ ವಿರುದ್ಧವಾಗಿ ಮಾತನಾಡಿದರು. ಅದರಲ್ಲಿ ಅನ್ಯ ನಗರದ ಜನರೂ ಒಳಗೊಂಡಿದ್ದರು ಮತ್ತು ಹೇಳಿದರು. ಈ ಮಸೀದಿಯು ಸದಾ ದೇಶದ ಕಾನೂನಿನ ರೀತಿ ಇತ್ತು ಮತ್ತು ಇರುವುದು ಎಂದು ನಂಬಿದ್ದೇನೆ. ನೀವು ಇಲ್ಲಿ ಬಂದು 7 ವರ್ಷಗಳಾಗಿವೆ. ನೀವು ನಮ್ಮ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತೀರಿ. ಸರ್ವ ಧರ್ಮಗಳ ಸಮ್ಮೇಳನಗಳನ್ನು ಆಯೋಜಿಸುತ್ತೀರ. ಹೊಸ ವರ್ಷದ ಸಂಧರ್ಭದಲ್ಲಿ ರಸ್ತೆಗಳನ್ನು ಸ್ವಚ್ಛಗೊಳಿಸುತ್ತಿರಾ. ನೀವು ನಿಮ್ಮ ಈ ಕಾರ್ಯ ಜಾರಿಯಲ್ಲಿರಿಸಿರಿ.

ಮತ್ತು ನುಡಿದರು. ನಮ್ಮ ಕ್ಷೇತ್ರದಲ್ಲಿ ಮಸೀದಿಯನ್ನು ಸ್ವೀಕರಿಸಲು ಸ್ವಲ್ಪ ಸಮಯ ಹಿಡಿಯಬಹುದು. Kochemberg ನ ಅಧ್ಯಕ್ಷರು ಹೇಳಿದರು. ಮೊದಲು ನಾನು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದೆ. ಆದರೆ "ನಿಮ್ಮ ಪ್ರೀತಿ ಎಲ್ಲರಿಗಾಗಿ" ಘೋಷಣೆ ನನ್ನ ಮುಂದೆ ಬಂದಾಗ ನಾನು ಯೋಚಿಸಿದೆ. ಲೋಕದಲ್ಲಿ ಇಂತಹ ಒಳ್ಳೆಯ ಘೋಷಣೆ ಮಾಡುವವರ ಬಗ್ಗೆ ನಾನು ಅನುಮಾನ ಪಡಲು ಹೇಗೆ ಸಾಧ್ಯ ಎನಿಸಿತು. ಮತ್ತು ಅವರು ಈ ಸಂಧರ್ಭದಲ್ಲಿ ಇದೊಂದು ಐತಿಹಾಸಿಕ ಘಟನೆಯಾಗಿದೆ ಎಂದು ಹೇಳಿದರು.

ಇವರೆಲ್ಲರಿಗೆ ಉತ್ತರವಾಗಿ ಖಲೀಫರು ಹೇಳಿದರು. ಇಸ್ಲಾಮ್ ತಮ್ಮ ನೆರೆಹೊರೆಯವರ ಬಗ್ಗೆ ಸಹಾನುಭೂತಿ ಹೊಂದಲು ಉಪದೇಶ ನೀಡುತ್ತದೆ. ಹೇಗೆ ನಾವು ನಮ್ಮ ನಿಕಟ ಸಂಬಂಧಿ ಹಾಗೂ ಹೆತ್ತವರ ಬಗ್ಗೆ ಕಾಳಜಿ ವಹಿಸುತ್ತೇವೆಯೋ ಹಾಗೆಯೇ ನಮ್ಮ ನೆರೆಹೊರೆಯವರ ಬಗ್ಗೆ ಕಾಳಜಿ ವಹಿಸಲು ಪ್ರೇರಣೆ ನೀಡುತ್ತದೆ. ಆದುದರಿಂದ ಈ ಮಸೀದಿಯ ಹತ್ತಿರವಿರುವ ನಮ್ಮ ಎಲ್ಲಾ ಸದಸ್ಯರು ತಮ್ಮ ನೆರೆಹೊರೆಯವರ ಸೇವೆ ಮಾಡುವುದು ತನ್ನ ಕರ್ತವ್ಯವೆಂದು ಭಾವಿಸಬೇಕು.

**13 ಅಕ್ಟೋಬರ್ 2019 (ಭಾನುವಾರ)**

ಹುಝೂರ್(ಅಬಿಅ) ಮುಂಜಾನೆ 8 ಗಂಟೆ 30 ನಿಮಿಷಕ್ಕೆ ಮಸ್ಜಿದ್ ಮಹದಿಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ಹುಝೂರ್(ಅಬಿಅ) ವಸತಿ ನಿಲಯಕ್ಕೆ ತೆರಳಿದರು. ಇಂದಿನ ಕಾರ್ಯಕ್ರಮದನ್ವಯ ಸ್ಟ್ರಾಸ್‌ಬರ್ಗ್‌ನಿಂದ ಫ್ರೆಂಕ್‌ಫರ್ಟ್ (ಜರ್ಮನಿ) ಗೆ ತೆರಳಬೇಕಿತ್ತು.

11:30 ಗಂಟೆಗೆ ಹುಝೂರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಪ್ರವೇಶಿಸಿದರು. ಅಲ್ಲಿ ಖಿದ್ದಾಮುಲ್ ಅಹ್ಮದಿಯಾದ ಒಂದು ತಂಡ ಅದು ಫ್ರಾನ್ಸ್‌ನ ಪ್ರವಾಸದ ವೇಳೆ ನಿರಂತರವಾಗಿ ರಕ್ಷಣಾ ಕರ್ತವ್ಯದಲ್ಲಿದ್ದರು. ಅವರು ತಮ್ಮ ಪ್ರಿಯ ಇಮಾಮರ ಜೊತೆಯಲ್ಲಿ ಚಿತ್ರ ತೆಗೆಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್(ಅಬಿಅ) ಮಸೀದಿಯ ಹೊರಗಿನ ಪ್ರದೇಶದಲ್ಲಿ ಸೇಬಿನ ಗಿಡ ನೆಟ್ಟರು. ಸೇಬಿನ ಗಿಡ ನೆಟ್ಟ ನಂತರ ಹುಝೂರ್(ಅಬಿಅ) ಅಲ್ಲಿಯ ಮುಬಲ್ಲಿಗರಾದ ಮನ್ಸೂರ್ ಅಹ್ಮದ್ ಸಾಹೇಬರಿಗೆ ಹೇಳಿದರು. ಈ ಗಿಡದಲ್ಲಿ ಮೊದಲಿನ ವರ್ಷ ಎಷ್ಟು ಫಲಗಳನ್ನು ದೊರಕುವುದೋ ಅಷ್ಟು ಬೈಅತ್‌ಗಳು ನನಗೆ ಬೇಕಾಗಿದೆ.

ಅನಂತರ ಹುಝೂರ್(ಅಬಿಅ) ಜಮಾಅತ್ ಸದಸ್ಯರ ನಡುವೆ ಆಗಮಿಸಿದರು. ಅವರು ಮುಂಜಾನೆಯಿಂದಲೇ ತಮ್ಮ ಪ್ರಿಯ ಇಮಾಮರನ್ನು ಬೀಳ್ಕೊಡಲು ಮಸೀದಿಯ ಹೊರಾಂಗಣದಲ್ಲಿ ಒಟ್ಟುಗೂಡಿದ್ದರು. ಹುಝೂರ್(ಅಬಿಅ) ಸಾಮೂಹಿಕ ದುಆ ಮಾಡಿಸಿದರು. ಮತ್ತು ಎಲ್ಲರಿಗೂ

ಅಸ್ಸಲಾಮ್ ಅಲೈಕುಮ್ ಹೇಳಿದರು. ಹೀಗೆ ಆ ಸಮೂಹವು ಜರ್ಮನಿಗೆ ಪ್ರಯಾಣ ಬೆಳೆಸಿತು. ಇಲ್ಲಿಂದ ಬೈತುಸ್ಸುಬೂಹ್ 240 ಕಿ.ಮೀ ನಷ್ಟು ದೂರವಿದೆ.

ಸುಮಾರು 05 ಕಿ.ಮೀ ದೂರ ಹೋದ ನಂತರ ಫ್ರಾನ್ಸ್ ಮತ್ತು ಜರ್ಮನಿಯ ಗಡಿ ಭಾಗದಲ್ಲಿ ಒಂದು Parking ಇದೆ. ಅಲ್ಲಿ ಕೆಲ ಸಮಯ ನಿಂತರು. ಅಲ್ಲಿ ಜರ್ಮನಿಯಿಂದ ಹುಝೂರ್(ಅಬಿಅ) ರನ್ನು ಸ್ವಾಗತಿಸಲು ಬಂದ ತಂಡವು ಶುಭ ಕೋರಿದರು. ಅದರಲ್ಲಿ ಜರ್ಮನಿಯ ಅಮೀರ್ ಸಾಹಿಬ್ ಮುಕರ್‍ರಮ್ ಅಬ್ದುಲ್ಲ ವಾಗಸ್ ಹೌಝುರ್ ಸಾಹಿಬ್, ಮುಕರ್‍ರಮ್ ಸಾದತ್ ಅಹ್ಮದ್ ಸಾಹಿಬ್ ಮುಬಲ್ಲಿಗ್ ಇನ್‌ಚಾರ್ಜ್ ಜರ್ಮನಿ. ಮುಕರ್‍ರಮ್ ಇಲ್ಯಾಸ್ ಮಜೂಕ ಸಾಹಿಬ್ National secretary ಹಾಗೂ ಮುಕರ್‍ರಮ್ ಕಮಾಲ್ ಅಹ್ಮದ್ ಸಾಹಿಬ್ ಅಧ್ಯಕ್ಷರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ ತಮ್ಮ ರಕ್ಷಣಾ ತಂಡದೊಂದಿಗೆ ಹುಝೂರ್(ಅಬಿಅ) ಅವರಿಗೆ ಸ್ವಾಗತಿಸಲು ಬಂದಿದ್ದರು.

ಆ ಸಂದರ್ಭದಲ್ಲಿ ಸ್ಟ್ರಾಸ್‌ಬರ್ಗ್ (ಫ್ರಾನ್ಸ್) ನಿಂದ ಇಲ್ಲಿಯವರೆಗೆ ಬೀಳ್ಕೊಡಲು ಜೊತೆಯಲ್ಲಿ ಬಂದ ತಂಡದವರನ್ನು ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಹಸ್ತಲಾಘವ ಮಾಡಿ ಬೀಳ್ಕೊಟ್ಟರು. ಸ್ಟ್ರಾಸ್‌ಬರ್ಗ್ (ಫ್ರಾನ್ಸ್) ನಿಂದ ಇಲ್ಲಿಯ ತನಕ ಮುಕರ್‍ರಮ್ ಅಮೀರ್ ಸಾಹಿಬ್, ಫ್ರಾನ್ಸ್ ಅಶ್ಲಾಕ್ ರಬ್ಬಾನಿ ಸಾಹಿಬ್, ಉಪ ಅಮೀರರಾದ ಅಸ್ಲಮ್ ಡೇಬರಿ ಸಾಹಿಬ್, ನಸೀರ್ ಅಹ್ಮದ್ ಶಾಹಿದ್ ಸಾಹಿಬ್ ಮುಬಲ್ಲಿಗ್ ಇನ್‌ಚಾರ್ಜ್, General Secretary ಫಹೀಮ್ ಅಹ್ಮದ್ ನಿಯಾಜ್ ಸಾಹಿಬ್ ಮತ್ತು ಅಧ್ಯಕ್ಷರು ಖುದ್ದಾಮುಲ್ ಅಹ್ಮದಿಯಾ ಫ್ರಾನ್ಸ್ ಜಮೀಲ್ ಉರ್ ರಹ್ಮಾನ್ ಸಾಹಿಬ್ ತಮ್ಮ ಖುದ್ದಾಮ್‌ಗಳ ರಕ್ಷಣಾ ತಂಡದೊಂದಿಗೆ ಆಗಮಿಸಿದ್ದರು.

ಅನಂತರ ಪ್ರಯಾಣ ಮುಂದುವರೆಯಿತು. ಸುಮಾರು 150 ಕಿ.ಮೀ ದೂರ ಹೋದ ನಂತರ ಮುಂದೆ ರಸ್ತೆಯಲ್ಲಿ ಒಂದು ಅಪಘಾತದ ಕಾರಣದಿಂದ ರಸ್ತೆ ಸಂಪೂರ್ಣವಾಗಿ ಬಂದ್ ಮಾಡಲಾಗಿತ್ತು. ಆ ಕಾರಣದಿಂದ 45 ನಿಮಿಷದವರೆಗೆ ಅಲ್ಲೇ ನಿಲ್ಲಬೇಕಾಯಿತು. ರಸ್ತೆ ತೆರವುಗೊಂಡ ನಂತರ ಪ್ರಯಾಣ ಮುಂದುವರೆಯಿತು. ಒಟ್ಟು 240 ಕಿ. ಮೀ ಪ್ರಯಾಣ ನಂತರ ಮಧ್ಯಾಹ್ನ 3 ಗಂಟೆಗೆ ಹುಝೂರ್(ಅಬಿಅ) ಜರ್ಮನಿ ಜಮಾಅತಿನ ಕೇಂದ್ರ ಬೈತುಸ್ಸುಬೂಹ್ ತಲುಪಿದರು.

ಬೈತುಸ್ಸುಬೂಹ್ ಆಗಮಿಸಿದ ನಂತರ ಹುಝೂರ್(ಅಬಿಅ) ಕಾರಿನಿಂದ ಹೊರ ಬರುತ್ತಲೇ ಫ್ರೆಂಕ್‌ಫರ್ಟ್ ನಗರ ಮತ್ತು ಅಕ್ಕಪಕ್ಕದ ಜಮಾಅತ್‌ಗಳ ಮತ್ತು ಜರ್ಮನಿಯ ವಿವಿಧ ನಗರಗಳಿಂದ ಬಂದ ಜಮಾಅತ್ ಸ್ತ್ರೀ, ಪುರುಷರಲ್ಲದೆ ಬಾಲಕ, ಬಾಲಕಿಯರು ಸೇರಿ ಹುಝೂರ್(ಅಬಿಅ) ರಿಗೆ ಪೂರ್ಣ ಉತ್ಸಾಹದಿಂದ ಸ್ವಾಗತಿಸಿದರು. ನಿಷ್ಠೆ ಹಾಗೂ ಪ್ರೀತಿಯಿಂದ ಕೈಗಳನ್ನು ಬೀಸುತ್ತಾ **“ಅಹಲಮ್ ವ ಸಹಲೌಂ ವ ಮರ್‌ಹಬಾ”** ಎಂಬ ಧ್ವನಿ ಮೊಳಗುತ್ತಿದ್ದವು.

ಒಂದೆಡೆ ಜಮಾಅತ್ ಬಾಂಧವರು ಪೂರ್ಣ ಉತ್ಸಾಹದಿಂದ ತಮ್ಮ ಪ್ರಿಯ ಇಮಾಮರಿಗೆ ಶುಭಾಗಮನ ಕೋರುತ್ತಿದ್ದರೆ, ಇನ್ನೊಂದೆಡೆ ಸ್ತ್ರೀಯರು ತಮ್ಮ ಕೈಗಳನ್ನು ಬೀಸುತ್ತ ತಮ್ಮ ಪ್ರಿಯ ನೇತಾರರ ದರ್ಶನದ ಭಾಗ್ಯ ಪಡೆಯುತ್ತಿದ್ದರು. ಬಾಲಕ ಬಾಲಕಿಯರು ವಿವಿಧ ಗುಂಪುಗಳನ್ನಾಗಿ ಮಾಡಿಕೊಂಡು ಸ್ವಾಗತ ಗೀತೆಯನ್ನು ಮತ್ತು ಪ್ರಾರ್ಥನಾ ಗೀತೆಯನ್ನು ವಾಚಿಸುತ್ತಿದ್ದರು ಸರ್ವತ್ರ ಸಂತೋಷದ ವಾತಾವರಣವಿತ್ತು.

ಮುಕರ್‍ರಮ್ ಬಾಜಾ ಮುಬಶ್ಶಿರ್ ಅಹ್ಮದ್ ಸ್ಥಳೀಯ ಅಮೀರ್ ಫ್ರೆಂಕ್‌ಫರ್ಟ್ ಇಮ್ತಿಯಾಝ್ ಅಹ್ಮದ್ ಶಾಹೀನ್ ಸಾಹಿಬ್ ಮುಬ್ಬಲಿಗ್ ಫ್ರೆಂಕ್‌ಫರ್ಟ್ ಹುಝೂರ್(ಅಬಿಅ) ರಿಗೆ ಶುಭಾಗಮನ ಕೋರುತ್ತ ಹಸ್ತಲಾಗವ ಮಾಡುವ ಭಾಗ್ಯ ಪಡೆದರು.

ತಮ್ಮ ಪ್ರಿಯ ನೇತಾರರಿಗೆ ಸ್ವಾಗತ ಕೋರುವ ಈ ಜಮಾಅತ್ ಬಾಂಧವರು ಫ್ರೆಂಕ್‌ಫರ್ಟ್ ನಗರದ ವಿವಿಧ ಕ್ಷೇತ್ರಗಳ ಹಾಗೂ ಜಮಾಅತ್‌ಗಳಲ್ಲದೇ Friedberg, Gieben, Mannhiem, Hanau, Heidel burg, Mainz, Wiesbaden, Hamberg ರಿಂದಲೂ ಆಗಮಿಸಿದ್ದರು. ಕೆಲ ಸದಸ್ಯರು ಮತ್ತು ಕುಟುಂಬಗಳು ಬಹು ದೀರ್ಘವಾದ ಪ್ರಯಾಣ ಬೆಳೆಸಿ ಇಲ್ಲಿಗೆ ಬಂದಿದ್ದರು. ವಿಶೇಷವಾಗಿ ಹೆಂಬರ್ಗ್‌ನಿಂದ ಬಂದವರು 550 ಕಿ.ಮೀ ನಷ್ಟು ದೀರ್ಘ ಪ್ರಯಾಣ ಬೆಳೆಸಿ ಬಂದಿದ್ದರು. ಹುಝೂರ್(ಅಬಿಅ) ರವರನ್ನು ಸ್ವಾಗತಿಸಲು ಬಂದವರ ಸಂಖ್ಯೆ ಎರಡು ಸಾವಿರ ನಾಲ್ಕು ನೂರ ಹದಿನೈದಾಗಿತ್ತು.

3 ಗಂಟೆ 25 ನಿಮಿಷಕ್ಕೆ ಹುಝೂರ್(ಅಬಿಅ) ಆಗಮಿಸಿ ಝೋಹರ್ ಮತ್ತು ಅಸರ್ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತನ್ನ ವಸತಿ ನಿಲಯಕ್ಕೆ ನರ್ಗಮಿಸಿದರು.

ಹುಝೂರ್(ಅಬಿಅ) ಅವರ ಸ್ವಾಗತಕ್ಕೆ ಬಂದ ಜರ್ಮನಿಯ ವಿವಿಧ ಜಮಾಅತ್ತುಗಳಿಂದ ಬಂದ ಸ್ತ್ರೀ, ಪುರುಷರೆಲ್ಲರೂ ತಮ್ಮ ಪ್ರೀತಿಯ ಇಮಾಮರ ನೇತೃತ್ವದಲ್ಲಿ ಝುಹರ್ ಅಸರ್ ನಮಾಝ್ ನಿರ್ವಹಿಸಿದರು.

ಹುಝೂರ್(ಅಬಿಅ) ಕಚೇರಿಯ ಅಂಚೆ, ವರದಿಗಳು ಮತ್ತು ಪತ್ರಗಳನ್ನು ಪರಿಶೀಲಿಸಿದರು. ಮತ್ತು ಉಪದೇಶಗಳನ್ನು ನೀಡಿದರು. ಪ್ರವಾಸದ ನಡುವೆ ಲಂಡನ್ ಕೇಂದ್ರ ಕಛೇರಿ ಹಾಗೂ ಖಾದಿಯಾನ್ ಕೇಂದ್ರದಿಂದ ಮತ್ತು ರಬ್ವಾ ಹಾಗೂ ಇತರ ವಿವಿಧ ದೇಶಗಳಿಂದ ಕ್ರಮಬದ್ಧವಾಗಿ ಅಂಛೆಗಳು, ವರದಿಗಳು ಮತ್ತು ಪತ್ರಗಳು Fax, ಇ–ಮೇಲ್ ಮೂಲಕ ದೊಡ್ಡ ಸಂಖ್ಯೆಯಲ್ಲಿ ಅಂಚೆಗಳು ಲಭ್ಯವಾಗುತ್ತಿವೆ. ಅಲ್ಲದೇ ಯಾವ ದೇಶದ ಪ್ರವಾಸವಿರುತ್ತದೆಯೋ ಅಲ್ಲಿಯ ಜಮಾಅತ್‌ನ ಸ್ತ್ರೀ, ಪುರುಷರ ಮತ್ತು ಮಕ್ಕಳಿಂದ ನೂರಾರು, ಸಾವಿರಾರು ಪತ್ರಗಳು ಇದರ ಹೊರತಾಗಿ ಇರುತ್ತವೆ. ಇವೆಲ್ಲ ಅಂಚೆಗಳು ಹುಝೂರ್(ಅಬಿಅ) ತಮ್ಮ ಪ್ರವಾಸದ ಜೊತೆ ಜೊತೆಯಲ್ಲಿಯೇ ಪರಿಶೀಲಿಸುತ್ತಾರೆ ಮತ್ತು ತನ್ನ ಶುಭ ಹಸ್ತದಿಂದ ಆ ಪತ್ರಗಳ ವರದಿಗಳ ಉತ್ತರವಾಗಿ ನಿರ್ದೇಶನಗಳನ್ನು ನೀಡುತ್ತಾರೆ.

8 ಗಂಟೆಗೆ ಹುಝೂರ್(ಅಬಿಅ) ಆಗಮಿಸಿ ಮಗ್ರಿಬ್, ಇಶಾಅ ನಮಾಝ್ ಜಮಾಮಾಡಿ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಹುಝೂರ್(ಅಬಿಅ) ಬೈತುಸ್ಸುಬೂಹ್‌ದಲ್ಲಿಯೇ ತಂಗಿದ್ದರು. ಬೈತುಸ್ಸುಬೂಹಿನ ವಿವಿಧ ಭಾಗಗಳನ್ನು ವಿವಿಧ ಬಣ್ಣಗಳ ಧ್ವಜಗಳಿಂದ ಶೃಂಗರಿಸಲಾಗಿತ್ತು. ಮತ್ತು ಆ ಕೇಂದ್ರದ ವಿವಿಧ ಕಟ್ಟಡಗಳ ಮೇಲೆ ದೀಪಗಳನ್ನು ಅಲಂಕರಿಸಲಾಗಿತ್ತು. ರಾತ್ರಿಯ ವೇಳೆ ವಿಧ್ಯುತ್ ದೀಪಗಳು ಬಹು ಸುಂದರವಾಗಿ ಕಾಣುತ್ತಿದ್ದವು. ಕ್ಷೇತ್ರವೆಲ್ಲ ಪ್ರಕಾಶದಿಂದ ಜಗಮಿಸುತ್ತಿತ್ತು.

**14 ಅಕ್ಟೋಬರ್ 2019 (ಸೋಮವಾರ)**

ಹುಝೂರ್(ಅಬಿಅ) ಮುಂಜಾನೆ 5 ಗಂಟೆ 50 ನಿಮಿಷಕ್ಕೆ ಆಗಮಿಸಿ ನಮಾಝ್ ಪಜ್ರ್ ನಿರ್ವಹಿಸಿ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ವಿವಿಧ ಕಚೇರಿಯ ಕಾರ್ಯಗಳಲ್ಲಿ ತೊಡಗಿದರು.

**ಕೌಟುಂಬಿಕ ಭೇಟಿಗಳು**

11:15 ಕ್ಕೆ ಹುಝೂರ್(ಅಬಿಅ) ತಮ್ಮ ಕಛೇರಿಗೆ ಆಗಮಿಸಿದರು ಮತ್ತು ಕೌಟುಂಬಿಕ ಭೇಟಿಗಳನ್ನು ಪ್ರಾರಂಭಿಸಿದರು. 38 ಕುಟುಂಬಗಳ 249 ಸದಸ್ಯರು ಹಾಗೂ ಇಬ್ಬರು ವೈಯಕ್ತಿಕ ಭೇಟಿ ಮಾಡುವ ಭಾಗ್ಯ ಪಡೆದರು.

ಭೇಟಿಯಾದ ಈ ಕುಟುಂಬಗಳು ಜರ್ಮನಿಯ 25 ವಿವಿಧ ಜಮಾಅತ್ತುಗಳಿಂದ ಬಂದಿದ್ದರು ಮತ್ತು ಕೆಲವು ಕುಟುಂಬಗಳು ಬಹು ದೂರದ ಕ್ಷೇತ್ರಗಳಿಂದ ಪ್ರಯಾಣ ಬೆಳೆಸಿ ಇಲ್ಲಿ ತಲುಪಿದ್ದರು. Dortmund ಜಮಾಅತ್ತಿನಿಂದ ಬಂದ ಕುಟುಂಬಗಳು 200 ಕಿ.ಮೀ ದೂರದ ಪ್ರಯಾಣ ಬೆಳೆಸಿ ಇಲ್ಲಿ ತಲುಪಿದ್ದರು. ಅಲ್ಲದೇ ಪಾಕಿಸ್ತಾನದಿಂದ ಬಂದ ಓರ್ವ ಮಿತ್ರ ಹಾಗೂ ಲಾಯ್‌ಬೇರಿಯಾ ದೇಶದಿಂದ ಬಂದ ಒಂದು ಕುಟುಂಬ ಭೇಟಿ ಮಾಡುವ ಭಾಗ್ಯ ಪಡೆದರು.

ಇವಲ್ಲರೂ ಪ್ರೀತಿಯ ಇಮಾಮರ ಜೊತೆಯಲ್ಲಿ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್(ಅಬಿಅ) ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಲೇಖನಿ (Pen) ನೀಡಿದರು. ಮತ್ತು ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್‌ಲೇಟ್ ನೀಡಿದರು.

ಭೇಟಿಗಳ ಈ ಕಾರ್ಯಕ್ರಮವು 1 ಗಂಟೆ 30 ನಿಮಿಷದವರೆಗೆ ಜಾರಿಯಲ್ಲಿತ್ತು. ಅನಂತರ ಹುಝೂರ್(ಅಬಿಅ) ತಮ್ಮ ವಸತಿನಿಲಯಕ್ಕೆ ತೆರಳಿದರು.

**ಮಸ್ಜಿದ್ ಮುಬಾರಕ್‌ನ ಉದ್ಘಾಟನಾ ಸಮಾರಂಭ**

ಇಂದಿನ ಕಾರ್ಯಕ್ರಮದನ್ವಯ wresbaden ನಗರದಲ್ಲಿ “ಮಸ್ಜಿದ್ ಮುಬಾರಕ್” ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿತ್ತು. 4 ಗಂಟೆ 40 ನಿಮಿಷಕ್ಕೆ ಹುಝೂರ್(ಅಬಿಅ) Wesbadem ಗೆ ಹೊರಟರು. ಫ್ರೆಂಕ್‌ಫರ್ಟ್ ನಿಂದ Weiesbadom ನಗರದ ದೂರ 46 ಕಿ.ಮೀ ಇದೆ. ಸುಮಾರು 55 ನಿಮಿಷದ ಪ್ರಯಾಣದ ನಂತರ ಹುಝೂರ್(ಅಬಿಅ) **“ಮಸ್ಜಿದ್ ಮುಬಾರಕ್”** ತಲುಪಿದರು.

ಸ್ಥಳೀಯ ಜಮಾಅತ್ತಿನ ಸ್ತ್ರೀ, ಪುರುಷ, ಬಾಲಕ, ಬಾಲಕಿಯರು, ಯುವಕರು, ವೃದ್ಧರು ಎಷ್ಟೋ ದಿನಗಳ ಹಿಂದಿನಿಂದಲೂ ತಮ್ಮ ಪ್ರೀತಿಯ ಖಲೀಫರನ್ನು ಬರಮಾಡಿಕೊಳ್ಳುವ ಸಿದ್ಧತೆಯಲ್ಲಿ ತೊಡಗಿದ್ದರು. ಅವರಿಗೆ ಇಂದಿನ ದಿವಸ ಹಬ್ಬದ ದಿವಸವಾಗಿತ್ತು. ಹುಝೂರ್(ಅಬಿಅ) ಅವರ ಪವಿತ್ರವಾದ ಪಾದಗಳು ಆ ಭೂಮಿಯ ಮೇಲೆ ಪ್ರವೇಶ ಮಾಡಲಿಕ್ಕಿದ್ದವು. ಆದುದರಿಂದ ಪ್ರತಿಯೊಬ್ಬರು ಹರ್ಷಗೊಂಡಿದ್ದರು. ತಮ್ಮ ಪ್ರೀತಿಯ ನೇತಾರರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಹುಝೂರ್(ಅಬಿಅ) ಬರುತ್ತಲೇ ಜಮಾಅತ್ ಬಾಂಧವರು ಪೂರ್ಣ ಹುಮ್ಮಸ್ಸಿನಿಂದ ತಮ್ಮ ಪ್ರೀತಿಯ ನೇತಾರರನ್ನು ಸ್ವಾಗತಿಸಿದರು. ಬಾಲಕ, ಬಾಲಕಿಯರು ತಂಡದೊಂದಿಗೆ ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸಿದರು. ಹಿರಿಯರಾಗಲಿ, ಕಿರಿಯರಾಗಲಿ ತಮ್ಮ ಪ್ರೀತಿಯ ನೇತಾರರ ಆಗಮನವನ್ನು ಸ್ವಾಗತಿಸುತ್ತಿದ್ದರು. ಪುರುಷರು ಘೋಷಣೆ ಹಾಕುತ್ತಿದ್ದರು. ಮಹಿಳೆಯರು ದರ್ಶನ ಭಾಗ್ಯ ಪಡೆಯುತ್ತಿದ್ದರು.

ಸ್ಥಳೀಯ ಅಮೀರ್ ಜಮಾಅತ್ ಮುಕರ್ರಮ್ ಮಿಯಾ ಉಮರ್ ಅಜೀಜ್ ಸಾಹಿಬ್‌ರವರು ಹುಝೂರ್(ಅಬಿಅ) ರಿಗೆ ಶುಭಾಗಮನ ಕೋರುತ್ತ ಹಸ್ತಲಾಘವ ಭಾಗ್ಯ ಪಡೆದರು. ಒಬ್ಬ ರಾಜಕೀಯ ಪೌರರು Cristoph Manjura ಸಾಹಿಬ್ ಅವರು ಮೇಯರ್‌ನ ಪ್ರತಿನಿಧಿಯಾಗಿ ಬಂದಿದ್ದರು. ಅವರು ಮೇಯರ್ ವತಿಯಿಂದ ಹುಝೂರ್(ಅಬಿಅ) ರವರಿಗೆ ಸ್ವಾಗತ ಬಯಸಿದರು. ಹಸ್ತಲಾಘವ ಮಾಡಿದರು. ಹುಝೂರ್‌ರವರಿಗೆ ಅಝೀಝುಂ ದಾನಿಯಲ್ ಬಿಲಾಲ್ ಮತ್ತು ಹಝ್‌ರತ್ ಬೇಗಂ ಸಾಹಿಬಾ (ಹುಝೂರ್(ಅಬಿಅ) ರ ಧರ್ಮಪತ್ನಿ) ಅವರಿಗೆ ಅಝೀಝು ವಸೀಖ ಅಹ್ಮದ್ ಪುಷ್ಪಗುಚ್ಛ ಅರ್ಪಿಸಿದರು.

ಅನಂತರ ಹುಝೂರ್(ಅಬಿಅ) ಮಸೀದಿಯ ಹೊರಾಂಗಣದ ಗೋಡೆಯಲ್ಲಿ ಸ್ಥಾಪಿಸಲಾದ ಹಲಗೆಯ ಉದ್ಘಾಟನಾ ಪರದೆಯನ್ನು ತೆರವುಗೊಳಿಸಿದರು. ಅನಂತರ ಹುಝೂರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಪ್ರವೇಶಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝು ನಿರ್ವಹಣೆಯ ನಂತರ ಮಸೀದಿಯ ಉದ್ಘಾಟನೆ ಮಾಡಿದರು. ಅನಂತರ ಹುಝೂರ್(ಅಬಿಅ) ಜಮಾಅತ್ತಿನ ಈ ಹೊಸ ಕೇಂದ್ರವನ್ನು ವೀಕ್ಷಿಸಿದರು.

ಮಸೀದಿಯ ಈ ಫ್ಲಾಟ್ 2013 ರಲ್ಲಿ ಖರೀದಿಸಲಾಗಿತ್ತು. ಈ ಫ್ಲಾಟಿನ ಒಟ್ಟು ವಿಸ್ತೀರ್ಣ 2970 ಚ.ಮೀ ಆಗಿದೆ. ಮಸೀದಿಯ ಒಟ್ಟು ಭಾಗ 1300 ಚ.ಮೀ ಆಗಿದೆ. ಹುಝೂರ್(ಅಬಿಅ) 4 ಜೂನ್ 2014 ರಂದು ಈ ಮಸೀದಿಯ ಅಡಿಗಲ್ಲು ಹಾಕಿದ್ದರು. ಈ ಮಸೀದಿಯಲ್ಲಿ 8 ಮೀ ಅಗಲ, ಗುಂಬಜ್ ಮತ್ತು 12 ಮೀ ಎತ್ತರ ಗೋಪುರ (ಮೀನಾರ್) ಇದೆ. ಈ ಮಸೀದಿಯ ನಿರ್ಮಾಣ ವೆಚ್ಚ 2.2 ಬಿಲಿಯನ್ ಯೂರೋ ಆಗಿದೆ ಈ ಮಸೀದಿಯಲ್ಲಿ 700 ಜನರು ನಮಾಝ್ ನಿರ್ವಹಿಸಬಹುದಾಗಿದೆ.

ಈ ಮಸೀದಿಯಲ್ಲಿ ನಮಾಝ್‌ಗೋಸ್ಕರ ಎರಡು ಸಭಾಂಗಣಗಳು, ಒಂದು ವಿವಿಧೋದ್ದೇಶ (Multipurpose) ಸಭಾಂಗಣ, ಐದು ಕಚೇರಿಗಳು (Office) ಗ್ರಂಥಾಲಯ, ಅಡುಗೆ ಕೋಣೆ, ಸಾಮಗ್ರಿ ಕೋಣೆ (store) ಮತ್ತು ಒಂದು ಮುರಬ್ಬಿಯರ ನಿವಾಸವೂ ಇದೆ. ಈ ಮಸೀದಿಯಲ್ಲಿ ಒಂದು ದೊಡ್ಡ Terrace ಸಹ ಇದೆ. ಮಸೀದಿ, ಮಿಷನ್ ಹೌಸ್ ಮತ್ತು ಕಚೇರಿಗಳು ಇತ್ಯಾದಿ ವೀಕ್ಷಿಸಿದ ನಂತರ ಹುಝೂರ್(ಅಬಿಅ) ಕೆಲ ಸಮಯಕ್ಕಾಗಿ ಮುರಬ್ಬಿ ಫರ್‌ಹದ್ ಅಹ್ಮದ್ ಸಾಹಿಬ್‌ರವರ ನಿವಾಸಕ್ಕೆ ಹೋದರು.

ಅನಂತರ ಹುಝೂರ್(ಅಬಿಅ) ಲಜ್ನಾ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಮಹಿಳೆಯರು ಹುಝೂರ್(ಅಬಿಅ) ರ ದರ್ಶನ ಪಡೆದರು. ಲಜ್ನಾ ಮತ್ತು ಬಾಲಕಿಯರು ಸಾಮೂಹಿಕವಾಗಿ ಪ್ರಾರ್ಥನೆ ಗೀತೆಯನ್ನು ಮತ್ತು ಸ್ವಾಗತ ಗೀತೆಯನ್ನು ಪ್ರಸ್ತುತಪಡಿಸಿದರು. ಹುಝೂರ್(ಅಬಿಅ) ಸುಮಾರು 25 ನಿಮಿಷದವರೆಗೆ ಲಜ್ನಾ ಸಭಾಂಗಣದಲ್ಲಿ ಉಪಸ್ಥಿತರಿದ್ದರು. ಬಾಲಕಿಯರು ನಿರಂತರವಾಗಿ ನಝ್ಮ್‌ಗಳು ಪಠಿಸುತ್ತಿದ್ದರು. ಸಿದ್ಧತೆ ಅವರು ಹಲವು ವಾರಗಳ ಹಿಂದಿನಿಂದಲೂ ಪ್ರಾರಂಬಿಸಿದರು.

ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಸುಮಾರು 300 ವರೆಗೆ ಇದ್ದ ಎಲ್ಲಾ ಬಾಲಕಿಯರಿಗೆ ಚಾಕ್‌ಲೇಟ್ ನೀಡಿದರು. ಅನಂತರ ಮಸೀದಿಯ ಹೊರಾಂಗಣದಲ್ಲಿ ಬಾದಾಮಿಯ ಒಂದು ಸಸ್ಯ ನೆಟ್ಟರು.

ಅನಂತರ ಮೇಯರ್‌ನ ಪ್ರತಿನಿಧಿಯಾಗಿ ಬಂದಿದ್ದ ಪೌರರು cristoph Manjura ಸಹ ಒಂದು ಸಸ್ಯ ನೆಟ್ಟರು. ಸಾಲಾಗಿ ಸರದಿಯಲ್ಲಿ ಬಾಲಕರು ನಿಂತಿದ್ದರು ಹುಝೂರ್(ಅಬಿಅ) ಪ್ರೀತಿಪೂರ್ವಕವಾಗಿ ಆ ಬಾಲಕರಿಗೆ ಚಾಕ್‌ಲೇಟ್ ನೀಡಿದರು

ಮಸೀದಿಯ ಉದ್ಘಾಟನಾ ಸಮಾರಂಭದ ಆಯೋಜನೆಯು Wisdem ನ ಒಂದು ಸುಪ್ರಸಿದ್ಧ ಸಭಾಂಗಣ Kurhas ನಲ್ಲಿ ಮಡಲಾಗಿತ್ತು. ಈ ಕಟ್ಟಡ 1810ರಲ್ಲಿ ನಿರ್ಮಿಸಲಾಗಿತ್ತು. ಮತ್ತು 1905 ರಲ್ಲಿ ಕೆಲವು ಬದಲಾವಣೆಗಳೊಂದಿಗೆ ಹೊಸದಾಗಿ ನಿರ್ಮಿಸಲಾಯಿತು. ಅನಂತರ 1987 ರಲ್ಲಿ ಇದಕ್ಕೆ ಹೊಸ ವಿಭಾಗಗಳನ್ನು ಸೇರಿಸಲಾಯಿತು. ಮತ್ತು ಅದರಲ್ಲಿ ಹಲವು ಬದಲಾವಣೆಗಳೊಂದಿಗೆ ಹೊಸದಾಗಿ ನಿರ್ಮಿಸಲಾಯಿತು.

ಈ ಕಟ್ಟಡ ವಿಝ್‌ಬಾದನ್ ನಗರದಲ್ಲಿ ತುಂಬ ಪ್ರಾಮುಖ್ಯತೆ ಹೊಂದಿದೆ. ಮತ್ತು ಇಲ್ಲಿ ಲೋಕದ ಮಹೋನ್ನತ ನೇತಾರರು ಹಾಗೂ ಆಡಳಿತಗಾರರು ಇಲ್ಲಿಯ ಸಮಾರಂಬಗಳಲ್ಲಿ ಭಾಗವಹಿಸುತ್ತಾರೆ. ಇಂದಿನ ಈ ಸಮಾರಂಭದಲ್ಲಿ ಅತಿಥಿಗಳ ಸಂಖ್ಯೆ 370 ಆಗಿತ್ತು. ಅವರಲ್ಲಿ :

| |
|---|
| Gert Uwe-Mende<br>(Lord mayor weisburn), |
| Frank-Tilo Becher<br>(member of state assembly), |
| Dr. George Manten<br>(ministry of Education & Arts), |
| Ferdinand Georgan<br>(retd. Judge), |
| Christoph Manjura<br>(HOD integration, education and living), |
| Jeamime Rudolph<br>(Head of immigration office weisburn), |
| Herr Phil Aspinal Coventry<br>(Anglican Priest), |
| Herr Prof. Dr. Markus Ferrari<br>(director internal medicine HSK), |
| Herr. Dimitri Muntanion<br>(federal criminal Police office police), |
| Waldemar Regner Hessen<br>(police Acadamy), |
| Micheal David<br>(Dist. Chief police officer), |
| vaneesa Krieger<br>(member of Home minidtry) |

ಇವರೆಲ್ಲರು ಭಾಗವಹಿಸಿದರು. ಅವರಲ್ಲದೆ ವಿದ್ವಾಂಸರು, ವೈದ್ಯರು, ಇಂಜಿನಿಯರು, ಅಧ್ಯಾಪಕರು, ವಕೀಲರು, ವಿವಿಧ ಸರಕಾರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುವ ಆಡಳಿತಗಾರರು ಪೋಲೀಸ್ ಅಧಿಕಾರಿಗಳು ಹಾಗೂ ಜೀವನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಜನರು ಭಾಗವಹಿಸಿದ್ದರು.

ಕಾರ್ಯಕ್ರಮದನ್ವಯ ಹುಝೂರ್(ಅಬಿಅ) ಆರುವರೆ ಗಂಟೆಗೆ ಮಸ್ಜಿದ್ ಮುಬಾರಕಿನ ಈ ಸಮಾರಂಬಕ್ಕೆ ಹೊರಟರು. ಪೋಲೀಸರು ವಿವಿಧ ರಸ್ತೆಗಳನ್ನು ಬ್ಲಾಕ್ ಮಾಡಿ ರಸ್ತೆಗಳನ್ನು ತೆರವುಗೊಳಿಸಿದರು ಮತ್ತು ಪ್ರಸ್ತುತ ತಂಡದವರಿಗಾಗಿ Escort ಸಹ ಮಾಡಿದರು. 6 ಗಂಟೆ 50 ನಿಮಿಷಕ್ಕೆ ಹುಝೂರ್(ಅಬಿಅ) Kurhaus ಗೆ ಆಗಮಿಸಿದರು. ಸಭಾಂಗಣದ ಹೊರ ಬಾಗಿಲಿನಲ್ಲಿ ಲಾರ್ಡ್ ಮೇಯರ್ Gert Uwe Mande ಹುಝೂರ್(ಅಬಿಅ) ರಿಗೆ ಸ್ವಾಗತ ಕೋರಿದರು ಮತ್ತು ತಮ್ಮ ಜೊತೆಯಲ್ಲಿ ಸಭಾಂಗಣಕ್ಕೆ ಬರಮಾಡಿಕೊಂಡರು. ಹುಝೂರ್(ಅಬಿಅ) ಬರುವುದಕ್ಕೆ ಮುಂಚೆಯೇ ಎಲ್ಲ ಅತಿಥಿಗಳು ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು.

ಕಾರ್ಯಕ್ರಮದ ಪ್ರಾರಂಭ ಪವಿತ್ರ ಖುರ್‌ಆನಿನ ಪಠಣದೊಂದಿಗೆ ಆಯಿತು. ಅದನ್ನು ಮುಕರ್ರಮ್ ದನಿಯಾಲ್ ದಾವೂದ್ ಸಾಹಿಬ್ ನೆರವೇರಿಸಿಕೊಟ್ರು. ಅನಂತರ ಅದರ ಜರ್ಮನ್ ಅನುವಾದ ನೌಶೇರ್‌ವಾನ್ ಖಾನ್ ಸಾಹಿಬ್ ಪ್ರಸ್ತುತಪಡಿಸಿದರು.

ಅನಂತರ ಪ್ರಥಮವಾಗಿ ಮುಕರ್ರಮ್ ರಾಷ್ಟ್ರೀಯ ಅಮೀರ್ ಸಾಹಿಬ್ ಜರ್ಮನಿ ಅಬ್ದುಲ್ಲ ವಾಗಸ್ ಹೌಝುರ್ ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅತಿಥಿಗಳಿಗೆ ಶುಭ ಕೋರುತ್ತ ವೀಝ್‌ಬಾದನ್ ನಗರ ಮತ್ತು ಜಮಾಅತ್ತಿನ ಪರಿಚಯ ನೀಡುತ್ತಾ ಹೇಳಿದರು. ವೀಝ್‌ಬಾದಾನ್ ನಗರವು Hessem ರಾಜ್ಯದ ರಾಜಧಾನಿಯಾಗಿದೆ. ಇದು ಬಹು ಪುರಾತನ ಇತಿಹಾಸ ಹೊಂದಿದೆ. ಈ ನಗರದ ಹೆಸರು ಮೊದಲ ಬಾರಿಗೆ Wiesbadam ಹೆಸರಿನಿಂದ ಜನರನ್ನು ಒಳಗೊಂಡಿದೆ. ಈ ನಗರ ವಿಶೇಷವಾಗಿ ಸರೋವರಗಳಿಗೆ ಪ್ರಸಿದ್ಧಿ ಪಡೆದಿದೆ. ಅದೇ ರೀತಿ ಈ ನಗರದಲ್ಲಿ ಹಲವು ವಿವಿಧ ವಿಭಾಗಗಳಿಗೆ ಸೇರಿದ ವಿಶ್ವವಿದ್ಯಾಲಯಗಳು ಸ್ಥಾಪನೆಗೊಂಡಿವೆ. ಆದುದರಿಂದ ಇಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ.

ಅಹ್ಮದಿಯಾ ಜಮಾಅತ್ತಿನ ಪರಿಚಯ ನೀಡುತ್ತ ಅಮೀರ್ ಸಾಹಿಬರು ಹೇಳಿದರು. ಇಲ್ಲಿ ಅಹ್ಮದಿಯರ ಸಂಖ್ಯೆ 1100ರ ಸಮೀಪವಿದೆ. 1992ರಲ್ಲಿ

ಇಲ್ಲಿ ಕ್ರಮಬದ್ಧವಾಗಿ ಜಮಾಅತ್ ಸ್ಥಾಪನೆಗೊಂಡಿತು. Wiesbaden ನಲ್ಲಿ ಇಲ್ಲಿಯವರೆಗೆ ಜಮಾಅತ್ ಒಟ್ಟು 13 Charity Walks ಹಮ್ಮಿಕೊಂಡಿರುತ್ತದೆ. ಅದರಲ್ಲಿ ನಾಗರೀಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ. ಅದಲ್ಲದೇ ಜಮಾಅತ್ ಇಲ್ಲಿ ಹೊಸ ವರ್ಷದ ಸಂದರ್ಭದಲ್ಲಿ ವಖಾರೆ ಅಮಲ್ (ಸೇವಾ ಕಾರ್ಯ) ಕೈಗೊಳ್ಳುತ್ತಿದೆ. ಹಾಗೆಯೇ ಇತರ ಜನಸೇವೆ ಕಾರ್ಯಗಳಲ್ಲಿ ಭಾಗವಹಿಸುತ್ತಿದೆ. ಕೊನೆಯಲ್ಲಿ ಅಮಿರ್ ಸಾಹೇಬರು ಈ ಸಮಾರಂಭದಲ್ಲಿ ಭಾಗವಹಿಸಿದ ಎಲ್ಲ ಅತಿಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಅನಂತರ Mr. Christoph Majura ತಮ್ಮ ಪರಿಚಯ ಭಾಷಣ ನೀಡಿದರು. ಅವರು ಸಿಟಿ ಕೌನ್ಸಿಲಿನ ಸದಸ್ಯರಾಗಿದ್ದಾರೆ. ಅವರ ಸಂಬಂಧ BPD ಪಕ್ಷದೊಂದಿಗಿದೆ. ಕೌನ್ಸಿಲಿನಲ್ಲಿ Integration ಗೆ ಸಂಬಂಧಿಸಿದ ಎಲ್ಲಾ ಹೊಣೆಗಾರಿಕೆಗಳು ಇವರಿಗೆ ಸೇರಿದೆ. ಅವರು ತಮ್ಮ ಭಾಷಣದಲ್ಲಿ ಪ್ರಥವಾಗಿ ಹುಝೂರ್(ಅಬಿಅ) ರಿಗೆ ಹಾಗೂ ಎಲ್ಲಾ ಸಭಿಕರಿಗೆ ಶುಭಾಗಮನ ಕೋರಿದರು ಮತ್ತು ಸಲಾಂ ಪ್ರಸ್ತುತಪಡಿಸಿದರು. ಅದರ ಜೊತೆಯಲ್ಲಿ ತಮ್ಮ ಸಂತೋಷ ವ್ಯಕ್ತಪಡಿಸುತ್ತ ಹೇಳಿದರು. ಇಲ್ಲಿ ಅಧಿಕ ಸಂಖ್ಯೆಯಲ್ಲಿ ಪುರುಷರು, ಮಹಿಳೆಯರು ಸೇರಿದ್ದಾರೆ. ಅವರಲ್ಲಿ ವಿವಿಧ ವರ್ಗಗಳಿಗೆ ಸೇರಿದ ಜನರಿದ್ದರೆ. ಉದಾಹರಣೆಗೆ ಪೊಲೀಸರು, ವಿವಿಧ ರಾಜಕೀಯ ವ್ಯಕ್ತಿಗಳು ಮತ್ತು Wiesbaden ಗೆ ಸೇರಿದ ವಿವಿಧ ವರ್ಗಗಳ ಜನರು ಇಲ್ಲಿ ಸೇರಿದ್ದಾರೆ.

ಅವರು ಪುರಾತನ ನಮಾಝ್ ಕೇಂದ್ರದ ಬಗ್ಗೆ ಹೇಳುತ್ತ ಹೇಳಿದರು. ಮೊದಲು ಒಂದು ಸಣ್ಣದಾದ ಕೋಣೆಯಲ್ಲಿ ನೀವು ಆರಾಧನೆ ಮಾಡುತ್ತಿದ್ದೀರಿ. ಮತ್ತು ಇತರ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೀರಿ. ಆದರೆ ಈಗ ಒಂದು ಅತ್ಯಂತ ಉತ್ತಮವಾದ ಕಟ್ಟಡ ನಿಮಗೆ ಲಭಿಸಿದೆ. ಇದಕ್ಕಾಗಿ ನಿಮಗೆಲ್ಲರಿಗೂ ಶುಭಾಶಯಗಳನ್ನು ಸಲ್ಲಿಸಬಯಸುತ್ತೇನೆ.

Manjura ಸಾಹಿಬ್ ಮುಂದುವರೆದು ಹೇಳಿದರು. ನಾನಗೆ ಈ ದಿನವನ್ನು ಎಂದೂ ಮರೆಯಲಾಗದು. ಸದಾ ನೆನಪಿನಲ್ಲಿರುವುದು ಏಕೆಂದರೆ ಇಂದು ನನಗೆ ಮಸ್ಜಿದ್ ಮುಬಾರಕ್ ಉದ್ಘಾಟನಾ ಸಂಧರ್ಭದಲ್ಲಿ ಮೊದಲ ಬಾರಿಗೆ ಒಂದು ಸಸ್ಯವನ್ನು ನೆಡುವ ಅವಕಾಶ ದೊರೆತಿದೆ. ನನಗೆ ಈ ಸಮಯದಲ್ಲಿ ಅಡಿಗಲ್ಲ ಸಮಾರಂಭ ಜ್ಞಾಪಕಕ್ಕೆ ಬರುತ್ತಿದೆ. ಆ ದಿನ ತುಂಬ ಮಳೆಯಾಗುತ್ತಿತ್ತು. ಆದರೆ ಖಲೀಫತುಲ್ ಮಸೀಹ್ ಬಂದು ತಮ್ಮ ವಾಹನದಿಂದ ಇಳಿಯುತ್ತಿರುವ ಹಾಗೆಯೇ ಮಳೆ ನಿಂತು ಹೋಗಿ ಬಿಸಿಲು ಬಂದಿತ್ತು. ಅಹ್ಮದಿಯಾ ಮುಸ್ಲಿಮ್ ಜಮಾತ್ ಮೊದಲಿನಿಂದಲೂ ನಗರ ಕಾರ್ಯಗಳಲ್ಲಿ ಸಹಕರಿಸುತ್ತ ಬಂದಿದೆ. ನೀವು Charity walk ಆಯೋಜನೆ ಮಾಡುತ್ತೀರಿ. ಹೊಸ ವರ್ಷ ಸಂಧರ್ಭದಲ್ಲಿ ವಖಾರೆ ಅಮಲ್ (ಸೇವಾ ಕಾರ್ಯ) ಮೂಲಕ ನಗರದ ಸೌಂದರ್ಯವನ್ನು ಕಾಪಾಡುವಲ್ಲಿ ಮುಂಚೂಣಿಯಲ್ಲಿದ್ದೀರಿ. ಆದುದರಿಂದ ಈ ನಗರದ ಶಿರಭಾಗದಲ್ಲಿಯೇ ನಿಮ್ಮ ಮಸೀದಿ ನಿರ್ಮಾಣ ಅನಿವಾರ್ಯವಾಗಿತ್ತು. ಮಸೀದಿಯ ವಿಳಾಸ ಸಿಗದಂತಹ ಮೂಲೆಯಲ್ಲಿ ಮಸೀದಿ ನಿರ್ಮಾಣ ಇಷ್ಟವಿರಲಿಲ್ಲ. ಆದುದರಿಂದ ನಗರ ಒಳಭಾಗದಲ್ಲಿಯೇ ಮಸೀದಿ ನಿರ್ಮಾಣವಾಗಿದೆ. ಕೊನೆಯಲ್ಲಿ ಮಸೀದಿ ನಿರ್ಮಾಣ ಪೂರ್ಣಗೊಂಡಿದ್ದಕ್ಕೆ ಜಮಾಅತ್ತಿಗೆ ಶುಭಾಶಯ ಕೋರಿದರು ಮತ್ತು ಈ ಮಸೀದಿ ನಿರ್ಮಾಣದಿಂದ ಎಲ್ಲರಿಗೆ ಸಂತಸ ಉಂಟಾಗಲಿ ಎಂದು ಹಾರೈಸಿದರು.

ಅನಂತರ Frank Tilo Decher ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರ ಸಂಬಂಧ SPD ಪಕ್ಷದಿಂದಿದೆ. ಮತ್ತು ಇವರು Wiesbadam ಪಾರ್ಲಿಮೆಂಟಿನ ಸದಸ್ಯರಾಗಿದ್ದಾರೆ. ಪ್ರಪ್ರಥಮವಾಗಿ ಅವರು ಹುಝೂರ್ ಅನ್ವರ್ ಅವರಿಗೆ ಶುಭ ಕೋರುತ್ತಾ ಸ್ವಾಗತಿಸಿದರು ಮತ್ತು ಹೇಳಿದರು. ಇದು ನನಗೆ ತುಂಬಾ ಗೌರವದ ವಿಷಯವಾಗಿದೆ. ಇಂದು ನನಗೆ ಹುಝೂರೆ ಅನ್ವರ್ ಅವರ ವೇದಿಕೆಯನ್ನು ಹಂಚಿಕೊಳ್ಳುವ ಸೌಭಾಗ್ಯ ದೊರೆತಿದೆ. ಮತ್ತು ಹೇಳಿದರು. ನಾನು ಒಬ್ಬ ಕ್ರೈಸ್ತನಾಗಿದ್ದೇನೆ. ನನ್ನ ಪ್ರಾರ್ಥನೆ ಇದೆ. ಅಲ್ಲಾಹನು ಈ ಮಸೀದಿಯನ್ನು ರಕ್ಷಿಸುವಂತಾಗಲಿ ಮತ್ತು ಅನುಗ್ರಹಿಸಲಿ. ಅಮೀನ್.

ಮತ್ತು ಹೇಳಿದರು. ಒಂದು ಸಂಘಟನೆಯಾದ ಮೇಲೆ ಒಟ್ಟುಗೂಡಲು ಒಂದು ಸ್ಥಳ ಅವಶ್ಯವಾಗಿರುತ್ತದೆ. ಆಗ ಮಾತ್ರ ಅದು ಸರಿಯಾದ ರೀತಿಯಲ್ಲಿ ಜೀವಂತವಾಗಿರಲು ಸಾಧ್ಯ. ಇಂದಿನ ದಿನ ವಿಶೇಷವಾಗಿ ಅಹ್ಮದಿ ಸದಸ್ಯರೆಲ್ಲರಿಗು ಸಂತೋಷದ ದಿನವಾಗಿದೆ. ಏಕೆಂದರೆ ಸ್ವಾತಂತ್ರ್ಯಪೂರ್ವಕವಾಗಿ ನಿಮ್ಮ ಕಾರ್ಯಗಳನ್ನು ಮಾಡಿಕೊಳ್ಳಬಹುದಾಗಿದೆ.

ಕೊನೆಯಲ್ಲಿ ಅವರು ಹೇಳಿದರು. ಈಗ ನಿಮಗೆ ಇಂತಹದೊಂದು ಅತಿಥಿ ಸತ್ಕಾರದಲ್ಲಿ ಉತ್ತಮ ಕಾಳಜಿ ವಹಿಸುವ ಜಮಾಅತ್ ದೊರೆತಿದೆ ಎಂದರೆ wiesbadam ನಗರದ ಸ್ಥಳೀಯ ಜನರ ಕರ್ತವ್ಯವು ಇದೆ. ಇದರಿಂದ ಪ್ರಯೋಜನ ಪಡೆಯಬೇಕು. ಆಸಕ್ತಿ ವಹಿಸಬೇಕು. ಮಸೀದಿಯಲ್ಲಿ ಪರಸ್ಪರ ಒಟ್ಟುಗೂಡಿ ವಾರ್ತಾಲಾಪ ಮಾಡಿಕೊಳ್ಳಬಹುದಾಗಿದೆ. ಆದುದರಿಂದ ಸಮಯ ಸಿಕ್ಕಾಗಲೆಲ್ಲ ಮಸೀದಿಗೆ ಹೋಗಿ ಸಂಪರ್ಕ ಸಾಧಿಸಬಹುದು.

ಅನಂತರ ಲಾರ್ಡ್ ಮೇಯರ್ Gert Uwe Mende ಸಾಹಿಬ್ ತಮ್ಮ ಪರಿಚಯ ಭಾಷಣ ಮಾಡಿದರು. ಮೇಯರ್ ಅವರು ಮೊಟ್ಟ ಮೊದಲಾಗಿ ಹುಝೂರ್(ಅಬಿಅ) ಅವರಿಗೆ ಶುಭ ಕೋರಿದರು. ಮತ್ತು ಮಸ್ಜಿದ್ ಸ್ಥಾಪನೆಯು ಶುಭಕರವಾಗಲಿ ಹಾಗೂ ಅನುಗ್ರಹಪೂರ್ಣವಾಗಲೆಂದು ಹರೈಸಿದರು.

ಮೇಯರ್ ಹೇಳಿದರು. ಅಹ್ಮದಿಯಾ ಜಮಾಅತ್ ನಮ್ಮ ನಗರದ ಒಂದು ಭಾಗವಾಗಿದೆ. ಈ ಸಂದರ್ಭದಲ್ಲಿ ನಾನು ನಿಮಗೆಲ್ಲರಿಗೂ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಇಂದು ನಿಮ್ಮ ಮಸೀದಿ ಪೂರ್ಣಗೊಂಡಿದೆ ಹಾಗೂ ಉದ್ಘಾಟನೆಯು ಹೊಂದಿದೆ.

ಮತ್ತು ಮೇಯರ್ ಸಾಹಿಬ್ ಹೇಳಿದರು. ಈ ಮಸೀದಿಯು ನಾಗರಿಕರನ್ನು ಒಟ್ಟುಗೂಡಿಸಿ ಪರಸ್ಪರ ಐಕ್ಯತೆಯ ಹಾದಿ ಸುಗಮಗೊಳಿಸುವ ಮಾರ್ಗವಾಗಬಹುದಾಗಿದೆ. ಮತ್ತು ಈ ಮಾತನ್ನು ಒತ್ತಿ ಹೇಳಿದರು. ನನ್ನ ಮನೆ ಮಸೀದಿಯ ಹತ್ತಿರದಲ್ಲಿಯೇ ಇದೆ. ಇಂದು ಮುಂಜಾನೆ ಈ ಕಡೆಯಿಂದ ಹೋಗುವಾಗ ನನಗೆ ಸ್ಪಷ್ಟವಾಯಿತು. ಇಂದಿನ ದಿನ ನಿಮಗೆ ಬಹು ಮಹತ್ವಪೂರ್ಣವಾಗಿದೆ ಎಂದು.

ಅವರು ಮುಂದುವರೆದು ಹೇಳಿದರು. ನಾವು ಪರಸ್ಪರ ಸಹಕಾರ ಭಾವನೆಯಿಂದ ಇರುವುದು ಅವಶ್ಯವಾಗಿದೆ. ಇದರಲ್ಲಿ ಖಂಡಿತವಾಗಿಯೂ ಬಹಳಷ್ಟು ಜನ ಮಸೀದಿಯ ಒಳಭಾಗ ಹೇಗಿದೆ ನೋಡದಿರುವವರು ಇರಬಹುದು. ಈಗ ನಮ್ಮ ಬಳಿ ಮಸೀದಿ ಇದೆ. ನಮಗೆ ನೋಡಬಹುದಾಗಿದೆ ಮತ್ತು ಅಹ್ಮದಿಯರ ಜೊತೆಯಲ್ಲಿ ಕೂಡಿ ಇರಬಹುದಾಗಿದೆ.

ಮತ್ತು ಮೇಯರ್ ಸಾಹಿಬರು ಮಸೀದಿಯ ನೆರೆಹೊರೆಯವರನ್ನು ಅಭಿನಂದಿಸಿದರು. ಅವರು ಮಸೀದಿ ನಿರ್ಮಾಣ ಕಾರ್ಯದಲ್ಲಿ ಸಹಕರಿಸಿದ್ದಾರೆ. ಅದೇ ರೀತಿ ಅಹ್ಮದಿಯಾ ಜಮಾಅತ್ ಮೊದಲಿನಿಂದಲೂ ಎಲ್ಲರೊಂದಿಗೆ ಒಳ್ಳೆಯ ರೀತಿ ವ್ಯವಹಾರ ಇಟ್ಟುಕೊಂಡಿದ್ದಾರೆ. ಈಗ ಮಸೀದಿ ಆದ ನಂತರವೂ ನೀವೆಲ್ಲರೂ ಪರಸ್ಪರ ಸಹಕಾರ ಶಾಂತಿಯಿಂದ ಇರುವರೆಂದು ಆಶಿಸುತ್ತೇನೆ.

ಅನಂತರ 7.25 ಗಂಟೆಗೆ ಹುಝೂರ್(ಅಬಿಅ) ತಮ್ಮ ಮಾತು ಆರಂಬಿಸಿದರು.

**ಹುಝೂರ್(ಅಬಿಅ) ರವರ ಉಪನ್ಯಾಸ**

ಹುಝೂರ್(ಅಬಿಅ) ತಶಹುದ್, ತವ್ವೂಝ್ ಮತ್ತು ತಸ್ಮಿಯಾ ನಂತರ ಹೇಳಿದರು. ಎಲ್ಲಾ ಗೌರವಾನ್ವಿತ ಅತಿಥಿಗಳಿಗೆ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ!

ಅಲ್ಲಾಹು ನಿಮಗೆಲ್ಲರಿಗೂ ಸದಾ ಸುಖ ಶಾಂತಿಯಿಂದ ಅನುಗ್ರಹಿಸಲಿ. ಇಂದು ಅಹ್ಮದಿಯ ಜಮಾಅತ್ ಈ ಸಭಾಂಗಣದಲ್ಲಿ ಸಮಾರಂಭ ಏರ್ಪಡಿಸಿದ ಉದ್ದೇಶವು ಈ ನಗರದಲ್ಲಿ ನಮಗೆ ಒಂದು ಮಸೀದಿಯನ್ನು ನಿರ್ಮಿಸುವ ಭಾಗ್ಯ ದೊರೆತಿದೆ ಮತ್ತು ಇದು ಜಮಾಅತ್ ಅಹ್ಮದಿಯಾದ ಒಂದು ಧಾರ್ಮಿಕ ಸಮಾರಂಭವಾಗಿದೆ ಮತ್ತು ಇದು ಸಂತೋಷದ ವಿಷಯವಾಗಿದೆ. ಆದರೆ ಈ ನಗರದ ಜನರು ತಮ್ಮ ಹೃದಯ ವೈಶಾಲ್ಯವನ್ನು ಪ್ರದರ್ಶಿಸುತ್ತ ಇಲ್ಲಿ ಆಗಮಿಸಿದ್ದು ಕಂಡು ಇನ್ನೂ ಸಂತೋಷವಾಗುತ್ತದೆ. ಇದು ಅಹ್ಮದಿಯಾ ಜಮಾಅತಿನ ಧಾರ್ಮಿಕ ಸಮಾರಂಭ, ಮಸೀದಿ (ಆರಾಧಾನಾ ಸ್ಥಳದ) ಪೂರ್ಣಗೊಂಡ ಸಮಾರಂಭವಾಗಿತ್ತು. ಈ ಉದ್ಘಾಟನಾ ಸಮಾರಂಭದಲ್ಲಿ ನೀವು ತುಂಬು ಹೃದಯದಿಂದ ಸಹಕಾರ ಭಾವನೆಯೊಂದಿಗೆ ಭಾಗವಹಿಸಿದ್ದೀರಿ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ನಿಮ್ಮ ಉಪಸ್ಥಿತಿಯೇ ಇದಕ್ಕೆ ಸಾಕ್ಷಿಯಾಗಿದೆ. ಈ ನಗರದ ಜನರು ತುಂಬ ಹೃದಯವಂತರು. ವಿವೇಕವಂತರೆಂದು ಇದರಿಂದ ಸ್ಪಷ್ಟವಾಗುತ್ತದೆ.

ಮಸೀದಿ ಎಂಬ ಹೆಸರಿನಿಂದ ಆತಂಕಪಡುವ ಕೆಲ ಜನರು ಇದ್ದಾರೆ. ಆದರೂ ಈ ನಗರದಲ್ಲಿ ವಿವಿಧ ರೀತಿಯ ಜನರು ನೆಲೆಸಿದ್ದಾರೆ. ವಿವಿಧ ಮುಸ್ಲಿಮ್ ವರ್ಗದವರೂ ನೆಲೆಸಿದ್ದಾರೆ. ಆದರೂ ಮುಸ್ಲಿಮರ ಕುರಿತು ಮುಸ್ಲಿಮೇತರು ಆತಂಕಪಡುವುದನ್ನು ನಾವು ನೋಡುತ್ತೇವೆ.

ಹುಝೂರ್(ಅಬಿಅ) ಹೇಳಿದರು. ಮಸೀದಿ ನಿರ್ಮಾಣದ ಉದ್ದೇಶವು ಒಂದು ಸ್ಥಳದಲ್ಲಿ ಒಟ್ಟುಗೂಡಿ ಆರಾಧನೆ ಮಾಡುವುದಾಗಿದೆ. ತನ್ನ ಧಾರ್ಮಿಕ ಶಿಕ್ಷಣದನ್ವಯ ಏಕದೇವನ ಆರಾಧನೆ ಮಾಡುವುದಾಗಿದೆ. ಪಾಶ್ಚಿಮಾತ್ಯ ಲೋಕದ ಕೆಲ ಮುಸ್ಲಿಮೇತರರು ತಿಳಿದಿರುವುದು ಬಹುಶಃ ಮಸೀದಿಯಲ್ಲಿ ಆತಂಕ ಪಡುವಂತಹ ಕೆಲವು ಚಟುವಟಿಕೆಗಳು ನಡೆಯುತ್ತವೆ ಎಂಬುದಾಗಿದೆ. ಆದರೆ ಪವಿತ್ರ ಖುರ್‌ಆನ್ ಮೀಸಿದಿಯ ನಿರ್ಮಾಣದ ಉದ್ದೇಶ ಹೀಗೆ ಹೇಳಿದೆ! ಏಕದೇವನ ಆರಾಧನೆಗಾಗಿ ಒಟ್ಟುಗೂಡಬೇಕು ಮತ್ತು ತಮ್ಮ ಆರಾಧನೆ ಹೇಗಿರಬೇಕೆಂದರೆ ಅಲ್ಲಾಹನ ಹಕ್ಕುಗಳ ಜೊತೆ ಜೊತೆಯಲ್ಲಿ ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸಬೇಕಾಗಿದೆ. ಆ ಕಾರಣ ಪವಿತ್ರ ಖುರ್‌ಆನ್ ಸ್ಪಷ್ಟಪಡಿಸಿದೆ. ಅನಾಥರ, ನಿರ್ಗತಿಕರ, ಬಡವರ ಬಗ್ಗೆ ಕಾಳಜಿ ವಹಿಸದವರ ಹಾಗೂ ಮಾನವೀಯತೆಯನ್ನು ಕಡೆಗಾಣಿಸಿದವರ ನಮಾಝ್ (ಆರಾಧನೆ) ಅವರ ಮುಖದ ಮೇಲೆ ಬಿಸಾಕಲಾಗುವುದು, ಅವರಿಗೆ ನಾಶದ ನರಕ ಕಾದಿದೆ ಎಂದು ಎಚ್ಚರಿಸಲಾಗಿದೆ.

ಹುಝೂರ್[ಅಯ್ಯದ] ಮುಂದುವರೆದು ಹೇಳಿದರು. ಒಂದು ಮಾತು ಸ್ಪಷ್ಟವಾಗುತ್ತದೆ. ನಿಜವಾದ ಮುಸಲ್ಮಾನನು ಮಸೀದಿಯ ಹೆಸರು ಹೇಳುವುದಾದರೆ ಒಂದು ಇಂತಹ ಕಟ್ಟಡದ ಹೆಸರು ತೆಗೆದು ಕೊಳ್ಳುವವನಾಗುತ್ತಾನೆ. ಅಲ್ಲಿ ಏಕದೇವನ ಆರಾಧನೆ ಮಾಡಲಾಗುತ್ತದೆ. ಅಲ್ಲಿ ತನಗಾಗಿ ಮಾತ್ರ ಪ್ರಾರ್ಥಿಸುವುದಿಲ್ಲ. ಲೋಕ ಕಲ್ಯಾಣಕ್ಕೂ ಪ್ರಾರ್ಥಿಸಬೇಕು. ತಮ್ಮ ಸಮಾಜದ ಸುಖ ಶಾಂತಿಗಾಗಿಯೂ ಪ್ರಾರ್ಥಿಸಬೇಕು. ನಮ್ಮ ಜಮಾಅತ್ತಿನ ಸ್ಥಾಪಕರನ್ನು ನಾವು ಮಸೀಹ್ ಮೌಊದ್[ಅ] ಎಂದು ನಂಬುತ್ತೇವೆ. ಅವರು ಹೇಳುತ್ತಾರೆ. ಯಾವುದಾದರು ಸ್ಥಳದಲ್ಲಿ ನೀವು ಇಸ್ಲಾಮ್ ಧರ್ಮವನ್ನು ಪರಿಚಯಿಸ ಬಯಸುವುದಾದರೆ ಮಸೀದಿಯನ್ನು ನಿರ್ಮಿಸಿ. ಇಸ್ಲಾಮಿನ ಪರಿಚಯ ದುಷ್ಪರಿಣಾಮ ಬೀರುವ ರೂಪದಲ್ಲಾದರೆ ಏನು ಪ್ರಯೋಜನವಿಲ್ಲ.

ಆ ಮಸೀದಿಯಲ್ಲಿ ಉಗ್ರವಾದದ ಯೋಜನೆಗಳು ಹಾಕುವುದಾದರೆ ಅದರಿಂದ ಏನು ಪ್ರಯೋಜನವಿಲ್ಲ. ಬದಲಾಗಿ ನಷ್ಟವಿದೆ. ಪರಿಚಯ ಆಗಬೇಕಾದರೆ ಅದರ ಒಳಿತುಗಳ ಪರಿಚಯ ಆಗಬೇಕು. ಆದುದರಿಂದ ಯಾವುದೇ ಒಂದು ಮಸೀದಿ ನಿರ್ಮಾಣವಾಗಿದೆ ಎಂದರೆ ಜನರು ಮುಸಲ್ಮಾನರ ನಡವಳಿಕೆ ನೋಡಬಯಸುತ್ತಾರೆ. ನಿಜವಾದ ಮುಸ್ಲಿಮರ ಮಸೀದಿ ಎಂದರೆ ಅಲ್ಲಿಯ ಮುಸ್ಲಿಮರು ಇತರರ ಹಿತವನ್ನು ಕಾಪಾಡಬೇಕು.

ಹುಝೂರ್[ಅಯ್ಯದ] ಹೇಳಿದರು. ಪವಿತ್ರ ಖುರ್‌ಆನನಲಿ ನೆರೆಹೊರೆಯವರ ಹಕ್ಕುಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ನಿಮ್ಮ ಮನೆಯ ಅಕ್ಕಪಕ್ಕದವರು ಮಾತ್ರ ಇಮ್ಮ ನೆರೆಹೊರೆಯವರಲ್ಲ. ಬದಲಾಗಿ ನಿಮ್ಮ ಜೊತೆಯ ಪ್ರಯಾಣಿಕರು, ಸಹೋದ್ಯೋಗಿಗಳು, ನಿಮ್ಮ ಸಂಪರ್ಕದಲ್ಲಿ ಇರುವವರೆಲ್ಲರೂ ನಿಮ್ಮ ನೆರೆಹೊರೆಯವರಾಗಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಇಲ್ಲಿ 1000 ಕ್ಕಿಂತ ಹೆಚ್ಚು ಅಹ್ಮದಿಯರು ನೆಲೆಸಿದ್ದಾರೆಂದು ತಿಳಿದುಬಂದಿದೆ. ಇಡೀ ನಗರವೇ ಅಹ್ಮದಿಯರ ನೆರೆಹೊರೆಯವರು ಎನ್ನಬಹುದಾಗಿದೆ ಮತ್ತು ಅವರ ಹಕ್ಕುಗಳನ್ನು ಪಾಲಿಸಬೇಕಾಗಿದೆ. ಹಕ್ಕುಗಳ ಪಾಲನೆಯ ಮಟ್ಟ ಹೇಗಿರಬೇಕು? ಇಸ್ಲಾಮ್ ಧರ್ಮದ ಸ್ಥಾಪಕರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ನಮಗೆ ಉಪದೇಶಿಸಿದರು. ನೆರೆಹೊರೆಯವರ ಹಕ್ಕುಗಳನ್ನು ಪಾಲಿಸುವ ಮಟ್ಟ ಹೇಗಿರಬೇಕೆಂದರೆ ಅಲ್ಲಾಹನು ನನಗೆ ನೆರೆಹೊರೆಯವರ ಹಕ್ಕಗಳ ಕುರಿತು ಎಷ್ಟೊಂದು ಒತ್ತಿ ಹೇಳಿದ್ದಾನೆಂದರೆ ನಾನು ಭಾವಿಸಿದೆ. ನಮ್ಮ ಆಸ್ತಿಯಲ್ಲಿಯೂ ಅವರ ಹಕ್ಕಿದೆ. ಇದಾಗಿದೆ ನೆರೆಹೊರೆಯವರ ಹಕ್ಕು. ಯಾವ ರೀತಿ ನೀವು ನಿಮ್ಮ ನಿಕಟ ಸಂಬಂಧಿ, ರಕ್ತ ಸಂಬಂಧಿಗಳೊಂದಿಗೆ ನಿಮ್ಮ ಆಸ್ತಿಯ ಪಾಲುದಾರರ ಹಕ್ಕುಗಳನ್ನು ಪಾಲಿಸುತ್ತಿರೋ, ಅದೇ ಪ್ರಕಾರ ತನ್ನ ನೆರೆಹೊರೆಯವರ ಹಕ್ಕುಗಳನ್ನು ಪಾಲಿಸಬೇಕಾಗಿದೆ. ಇದನ್ನು ಒಬ್ಬ ನಿಜವಾದ ಮುಸಲ್ಮಾನನು ತನ್ನ ಮಸೀದಿಗೆ ಆರಾಧನೆ ಮಾಡಲು ಹೊರಡುವಾಗ ಯೋಚಿಸಬೇಕಾಗಿದೆ ಮತ್ತು ನಡೆದುಕೊಳ್ಳಬೇಕಾಗಿದೆ.

ಇಲ್ಲಿ ನಮ್ಮ ರಾಷ್ಟ್ರೀಯ ಅಮೀರ್ ಸಾಹೇಬರು ಹೇಳಿದ್ದಾರೆ. ಈ ನಗರದಲ್ಲಿ ಸರೋವರಗಳಿವೆ. ನೀರೂ ಇದೆ. ನೀರು ಹೆಚ್ಚಿನ ಪ್ರಮಾಣದಲ್ಲಿದೆ. ಬಹುಶಃ ನಿಮಗೆ ಸಹಜವಾಗಿ ಈ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ತಮ್ಮ ಮನೆಯಲ್ಲಿ ನಲ್ಲಿ ತೆರೆಯುತ್ತಲೇ ನೀರು ಬರತೊಡಗುತ್ತದೆ. ಆದರೆ ನೀರಿಲ್ಲದ ಜನರ ಬವಣೆ ನೀವು ಊಹಿಸುವುದೂ ಇಲ್ಲ. ಆಫ್ರಿಕಾದಲ್ಲಿ ಹಲವು ಕ್ಷೇತ್ರಗಳಿವೆ. ಸುಮಾರು 80% ಇಂತಹ ಕ್ಷೇತ್ರ ಗಳಿರಬಹುದು. ಅದು Remote areas ನಲ್ಲಿ ನೀರಿನ ಸವಲತ್ತುಗಳಿಲ್ಲ. 6, 7 ಅಥವಾ 10 ರಿಂದ 12 ವಯಸ್ಸಿನ ಮಕ್ಕಳು ಸಣ್ಣ ಬಕೆಟ್‌ಗಳನ್ನು ಅಥವಾ ದೊಡ್ಡ ಬಕೆಟ್‌ಗಳನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು 2 ರಿಂದ 3 ಕಿ. ಮೀ. ನವರೆಗೆ ಹೋಗಿ ನೀರು ತರುತ್ತಾರೆ. ಇಡೀ ದಿನ ಇದರಲ್ಲಿ ಕಳೆದು ಹೋಗುತ್ತದೆ. ಈ ಕಾರಣದಿಂದ ಅವರು ಶಿಕ್ಷಣದಿಂದ ವಂಚಿತರಾಗುತ್ತಾರೆ.

ಅಮೀರ್ ಸಾಹೇಬರು ಈ ನಗರದ ಇನ್ನೊಂದು ವಿಶೇಷತೆಯು ಶಿಕ್ಷಣದ ಅಭಿವೃದ್ಧಿಯಾಗಿದೆ ಎಂದರು. ಈಗ ಆ ಜನರು ಕೇವಲ ನೀರಿನಿಂದ ವಂಚಿತರಲ್ಲ. ಬದಲಾಗಿ ಎಷ್ಟೋ ಕಿ. ಮೀ ದೂರ ನಡೆದುಕೊಂಡು ಹೋಗಿ ಕೆರೆಗಳಿಂದ ನೀರು ತರುತ್ತಾರೆ. ಅಲ್ಲಿ ಕಲುಷಿತ ನೀರು ಇರುತ್ತದೆ. ಅದೇ ಕೆರೆಯ ನೀರಿನಲ್ಲಿ ಜಾನುವಾರುಗಳು ನೀರು ಕುಡಿಯುತ್ತಿರುತ್ತದೆ. ಅದೇ ನೀರು ಮಕ್ಕಳು ತರುತ್ತಾರೆ ಮತ್ತು ಮನೆಯಲ್ಲಿ ಉಪಯೋಗ ಮಾಡುತ್ತಾರೆ. ಇದೇ ಕಾರಣದಿಂದ ಹಾಗೂ ಬಡತನದಿಂದಲೂ ಶಿಕ್ಷಣ ಪಡೆಯಲು ಆಗುವುದಿಲ್ಲ. ಅಂತಹ ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಮಸೀದಿಗಳನ್ನು ನಿರ್ಮಿಸಿದೆ. ಎಲ್ಲಿ ಜಮಾಅತ್ ಸ್ಥಾಪನೆಗೊಂಡಿದೆಯೋ ಅಲ್ಲಿ ಶಿಕ್ಷಣಕ್ಕಾಗಿ ಶಾಲೆಗಳನ್ನು ತೆರೆದಿದೆ. ಮತ್ತು ನೀರಿಗೋಸ್ಕರ Hand pump ಹಾಗೂ Solar pump ಅಳವಡಿಸಿದೆ. ನಾನು ಈ ಮಾತನ್ನು ಹೇಳುತ್ತಿರುತ್ತೇನೆ Solar pump ಅಥವಾ Hand pump ನಿಂದ ಸ್ವಚ್ಛ ನೀರು ಬರುತ್ತಿರುವಾಗ ಅಲ್ಲಿಯ ಮಕ್ಕಳ ಹಾಗೂ ಜನರ ಮುಖಗಳು ಸಂತೋಷದಿಂದ ಹೇಗೆ ಅರಳುತ್ತವೆ ಎಂದರೆ ಯೂರೋಪಿನಲ್ಲಿ ಯಾರಿಗಾದರೂ ಹಲವು ಮಿಲಿಯನ್‌ನ ಲಾಟರಿ ದೊರೆತಷ್ಟು ಸಂತೋಷ ಉಂಟಾಗುತ್ತದೆ.

ಇದಾಗಿದೆ ಅಹ್ಮದಿಯಾ ಜಮಾಅತ್ತಿನ ಕಾರ್ಯಶೈಲಿ. ಅಹ್ಮದಿಯಾ ಜಮಾಅತ್ ಎಲ್ಲೆಲ್ಲಿ ಮಸೀದಿ ನಿರ್ಮಿಸುತ್ತಿದೆಯೋ ಅಲ್ಲಿ ಇದೇ ತರಹದ ಸಹಕಾರ ಒದಗಿಸುತ್ತದೆ. ನಮ್ಮ ನೂರಾರು ಶಾಲೆಗಳಿವೆ. ಆಸ್ಪತ್ರೆಗಳಿವೆ ಮತ್ತು ನೀರಿನ ಯೋಜನೆಗಳಿವೆ. ಇದು ಕೇವಲ ಅಹ್ಮದಿಯರಿಗಾಗಿ ಅಲ್ಲ. ಬದಲಾಗಿ ಈ ಸೇವೆಯು ಸೃಷ್ಟಿಗಳ ಸೇವೆಯಾಗಿದೆ. ನಮ್ಮ ಆಸ್ಪತ್ರೆಗಳಲ್ಲಿ ಮುಸ್ಲಿಮೇತರರು ಇದ್ದಾರೆ. ಕ್ರೈಸ್ತರು ಇದ್ದಾರೆ ಅಥವಾ ಪೇಗಿನ್ ಇದ್ದಾರೆ ಅಥವಾ ಅನ್ಯ ಧರ್ಮಿಯರೂ ಸಹ ಇದ್ದಾರೆ. ಅಂದರೆ ನಾವು ಯಾವ ರೀತಿಯ ತಾರತಮ್ಯವಿಲ್ಲದೆ ಸೇವೆ ಸಲ್ಲಿಸುತ್ತಿದ್ದೇವೆ. ಅಲ್ಲಿಯ ಸ್ಥಳೀಯ ಅಹ್ಮದಿಯರಿದ್ದಾರೆ. ಅವರು ಮಸೀದಿಗೂ ಬರುತ್ತಾರೆ. ಅದರಿಂದ ಜನರ ಲಕ್ಷ್ಯ ಈ ಕಡೆ ವಾಲುತ್ತದೆ. ಆದರೆ ನಮ್ಮ ಏಕಮಾತ್ರ ಉದ್ದೇಶ ಸೇವೆ ಸಲ್ಲಿಸುವುದಾಗಿದೆ. ಇಲ್ಲಿ ಆಗುತ್ತಿರುವ ಜನಸೇವೆಯ ಕುರಿತು ನಮ್ಮ ಕೆಲ ಆದರಣೀಯ ಅತಿಥಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. Charity ಯ ಕಾರ್ಯಗಳನ್ನು ನಾವು ಮಾಡುತ್ತಿದ್ದೇವೆ ಅಥವಾ ಸಾರ್ವಜನಿಕ ಸೇವೆ ಮಾಡುತ್ತಿದ್ದೇವೆ. ಲೋಕದಲ್ಲಿ ಬಡವರಿಗೆ ಇನ್ನು ಹೆಚ್ಚು ಸೇವೆ ನಾವು ಮಾಡುತ್ತಿದ್ದೇವೆ. ಇದು ಅಹ್ಮದಿಯಾ ಜಮಾಅತ್ತಿನ ವಿಶೇಷತೆಯಾಗಿದೆ. ನಾವು ಎಲ್ಲಿ ಹೋದರೂ ಸಾರ್ವಜನಿಕರ ಸೇವೆ ಮಾಡುತ್ತೇವೆ. ನನಗೆ ಭರವಸೆ ಇದೆ. ಈ ಮಸೀದಿ ನಿರ್ಮಾಣ ಆದ ನಂತರವೂ ವರ್ಷ ಪ್ರಾರಂಬದಲ್ಲಾಗಲೀ ಅಥವಾ ವಿವಿಧ ಸಮಯದಲ್ಲಿ Charity ಅಥವಾ ಸಾರ್ವಜನಿಕರ ಸೇವೆ ಇಲ್ಲಿಯ ಜಮಾಅತ್ತಿನ ಸದಸ್ಯರು ಮೊದಲಿಗಿಂತ ಹೆಚ್ಚು ಮಾಡುವವರಾಗಬಹುದು. ಈ ಮೂಲಕ ಜನರಿಗೆ ತೋರಿಸಬೇಕಾಗಿದೆ. ನಿಜವಾದ ಇಸ್ಲಾಮ್ ಅಲ್ಲಾಹನ ಆರಾಧನೆ ಜೊತೆಯಲ್ಲಿ ಅವನ ಸೃಷ್ಟಿಗಳ ಕುರಿತು ಗಮನ ಸೆಳೆಯುತ್ತದೆ.

ಹುಝೂರ್[ಅಯ್ಯದ] ಹೇಳಿದರು. ಪವಿತ್ರ ಖುರ್‌ಆನಿನ ಮೊದಲ ಅಧ್ಯಾಯವೇ ಈ ಉಪದೇಶ ನೀಡಿದೆ. ಎಲ್ಲಾ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ, ಅವನು ಯಹೂದಿಯರ ಪರಿಪಾಲಕನಾಗಿದ್ದಾನೆ. ಅವನು ಕ್ರೈಸ್ತರ ಪರಿಪಾಲಕನೂ ಆಗಿದ್ದಾನೆ, ಹಿಂದುಗಳನ್ನು ಪರಿಪಾಲಿಸುವುದು ಅವನೇ ಆಗಿದ್ದಾನೆ ಮತ್ತು ಮುಸ್ಲಿಮರ ಪರಿಪಾಲಕನೂ ಅವನೇ ಆಗಿದ್ದಾನೆ. ಈ ಕಾರಣದಿಂದಲೇ ಇಸ್ಲಾಮ್ ಧರ್ಮದ ಸ್ಥಾಪಕರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಸದಾ ಮಾನವೀಯ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡಿದ್ದಾರೆ. ಆದುದರಿಂದಲೇ ಪವಿತ್ರ ಖುರ್‌ಆನ್ ಸಹ ಅವರನ್ನು ಸರ್ವಲೋಕಗಳಿಗೆ ಅನುಗ್ರಹ ಎಂದು ಕರೆದಿದೆ. ಕೆಲವರು ಹೇಳುತ್ತಾರೆ. ಇಸ್ಲಾಮ್ ಉಗ್ರವಾದದ ಧರ್ಮವಾಗಿದೆ. ಅದು ಉಗ್ರವಾದದ ಶಿಕ್ಷಣ ನೀಡುತ್ತಿದೆ. ಆದರೆ ಎಂದೂ ಇಸ್ಲಾಂ ಧರ್ಮವು ಉಗ್ರವಾದದ ಶಿಕ್ಷಣ ನೀಡಲಿಲ್ಲ. ನಾವು ಇತಿಹಾಸವನ್ನು ಅವಲೋಕಿಸಿದರೆ ಮತ್ತು ನ್ಯಾಯದೃಷ್ಟಿಯಿಂದ ಇಸ್ಲಾಮಿನ ಇತಿಹಾಸವನ್ನು ನೋಡಿದರೆ ಕಾಣಬಹುದು. ಇಸ್ಲಾಮ್ ಧರ್ಮದ ಸ್ಥಾಪಕರಾದ ಮುಹಮ್ಮದ್ ರಸೂಲುಲ್ಲಾಹ್[ಸ] ರವರಿಗೆ ತನ್ನ ಪ್ರಾಥಮಿಕ ಹಂತದ 13 ವರ್ಷಗಳು ಮಕ್ಕಾದಲ್ಲಿ ಅತ್ಯಂತ ಪೀಡನೆಯ ಮತ್ತು ದೌರ್ಜನ್ಯಗಳ ವರ್ಷಗಳಾಗಿದ್ದವು. ಆದರೂ ಪ್ರವಾದಿ[ಸ] ಅವರಿಗೆ ಯಾವ ಉತ್ತರವನ್ನು ನೀಡಲಿಲ್ಲ. ಮತ್ತೆ ಅವರ ಬರ್ಬರತೆ ಕಾರಣಗಳಿಂದಾಗಿ ಆ ದೌರ್ಜನ್ಯಗಳನ್ನು ಸಹಿಸಲು ಅಸಾಧ್ಯವಾದಾಗ ಪ್ರವಾದಿ[ಸ] ಮತ್ತು ಅವರ ಸಂಗಡಿಗರು ಅಲ್ಲಿಂದ ವಲಸೆ ಹೋಗಿ ಮದೀನದಲ್ಲಿ ವಾಸಿಸಿದರು. ಅಲ್ಲಿಯೂ ಮಕ್ಕದ ಅವಿಶ್ವಾಸಿಗಳು ಅವರನ್ನು ನೆಮ್ಮದಿ ಹಾಗೂ ಶಾಂತಿಯಿಂದ ಇರಲು ಬಿಡದೆ ಆಕ್ರಮಣ ಮಾಡಿದರು. ಪವಿತ್ರ ಖುರ್‌ಆನಿನಲ್ಲಿ ಯುದ್ಧ ಮಾಡಲು ಅಥವಾ ಕಠಿಣವಾಗಿ ವರ್ತಿಸಲು ಕೊಟ್ಟ ಪ್ರಥಮ ಆದೇಶವು ಮದೀನಕ್ಕೆ ವಲಸೆ ಹೋದ ನಂತರ ಬಂದುದಾಗಿದೆ. ಈ ಆದೇಶ 22ನೇ ಅಧ್ಯಾಯದಲ್ಲಿ ನಮೂದಿಸಲಾಗಿದೆ. ಈಗ ಆ ದುಷ್ಕರ್ಮಿಗಳಿಗೆ ಉತ್ತರ ನೀಡುವುದು ಅನಿವಾರ್ಯವಾಗಿದೆ. ಏಕೆಂದರೆ ಅವರು ಕೇವಲ ಮುಸ್ಲಿಮರನ್ನು ನಾಶ ಮಾಡಬಯಸುವುದನ್ನು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಜನರು ಧರ್ಮದ ವಿರುದ್ಧವಾಗಿದ್ದಾರೆ. ಇವರ ಆಕ್ರಮಣದಿಂದಾಗಿ ಯಾವ Synogogue ಸುರಕ್ಷಿತವಾಗಿರುವುದಿಲ್ಲ. ಯಾವ ಚರ್ಚ್ ಸುರಕ್ಷಿತವಾಗಿರಲಿಕ್ಕಿಲ್ಲ. ಯಾವ ಮಂದಿರವು ಸುರಕ್ಷಿತವಾಗಿರಲಿಕ್ಕಿಲ್ಲ. ಯಾವ ಮಸೀದಿಯೂ ಸುರಕ್ಷಿತವಾಗಿರುವುದಿಲ್ಲ. ಅಂದರೆ ಈ ದೌರ್ಜನ್ಯದಲ್ಲಿ ಪವಿತ್ರ ಖುರ್‌ಆನ್ ತನ್ನ ಮಸೀದಿಗಳ ಸುರಕ್ಷತೆ ಬಗ್ಗೆ ಮಾತ್ರ ಹೇಳಲಿಲ್ಲ, ತಮ್ಮ ಧರ್ಮವನ್ನು ಮಾತ್ರ ಸಂರಕ್ಷಣೆ ಮಾಡಿಕೊಳ್ಳಿ ಎಂದು ಹೇಳಲಿಲ್ಲ. ಬದಲಾಗಿ ಇವರು ಧರ್ಮಗಳ ಶತ್ರುಗಳಾಗಿದ್ದಾರೆ. ಇವರು ಯಾವ ಧರ್ಮವನ್ನು ನಾಶಪಡಿಸದೇ ಇರಲಾರರು. ಆದ ಕಾರಣ ಅವರಿಗೆ ಉತ್ತರ ನೀಡುವುದು ಅವಶ್ಯವಾಗಿದೆ ಆಗ ಮುಸಲ್ಮಾನರು ಅವರಿಗೆ ಉತ್ತರ ನೀಡಲು ಸಿದ್ಧರಾದರು. ಏಕೆಂದರೆ ಅಲ್ಲಾಹನ ಸಹಕಾರ ಅವರಿಗಿತ್ತು. ಆದುದರಿಂದ ಅವರು (ಅವಿಶ್ವಾಸಿಗಳು)

ಸಶಕ್ತರಾಗಿ ಎಲ್ಲ ಆಯುಧಗಳಿಂದ ಸುಸಜ್ಜಿತರಾಗಿ ಮಕ್ಕಾದಿಂದ ಬಂದಿದ್ದರು. ಅವರ ಎದುರಿನಲ್ಲಿ ಮುಸ್ಲಿಮರು ಅವರ ಮೂರನೇ ಭಾಗದಷ್ಟೂ ಇರಲಿಲ್ಲ. ಅವರ ಬಳಿ ಯಾವ ಆಯುಧಗಳು ಇರಲಿಲ್ಲ ಆದರೂ ಯುದ್ಧದಲ್ಲಿ ಮುಸ್ಲಿಮರು ವಿಜಯಿಯಾದರು. ಇದು ಮುಸಲ್ಮಾನರು ಮಾಡಿದ ಮೊದಲನೆಯ ಯುದ್ಧವಾಗಿತ್ತು. ಆ ಯುದ್ಧಗಳಿಗೆ ಪವಿತ್ರ ಖುರಆನ್ ಮುಸಲ್ಮಾನರಿಗೆ ಅನುಮತಿ ನೀಡಲು ಇದು ಕಾರಣವಾಗಿತ್ತು. ಆದರೆ ಈ ಅವಸ್ತೆಯನ್ನು ನೋಡಿ ಇಸ್ಲಾಮ್ ಧರ್ಮದ ಸ್ಥಾಪಕರು ಯಾವ ರೀತಿಯ ಮೃದು ವ್ಯವಹಾರ ಬಯಸುತ್ತಾರೆ. ಯುದ್ಧದ ನಂತರ ಯಾವ ಯುದ್ಧ ಖೈದಿಗಳು ಅವರ ಬಂದಿಯಾಗಿ ಬಂದಿದ್ದರೋ ಅವರಿಗೆ ಹೇಳುತ್ತಾರೆ. ನಿಮ್ಮಲ್ಲಿ ವಿದ್ಯಾವಂತರು ಅವಿದ್ಯಾವಂತರಿಗೆ ವಿದ್ಯೆಯನ್ನು ನೀಡಿದರೆ ಅವರನ್ನು ಬಿಡುಗಡೆ ಮಾಡಲಾಗುವುದು. ತಮ್ಮ ಜೀವತೆಗೆಯಲು ಕಾಯುತ್ತಿದ್ದ ಶತ್ರುಗಳಿಗೂ ಕೇವಲ ಶಿಕ್ಷಣದ ದೃಷ್ಟಿಯಿಂದ ಮತ್ತು ಮಾನವೀಯ ಮೌಲ್ಯ ಹಿತದೃಷ್ಟಿಯಿಂದ ಈ ಸೌಜನ್ಯದ ವ್ಯವಹಾರ ಮಾಡಿದರು.

ಹುಝೂರ್(ಅಬಿಅ) ಹೇಳಿದರು. ಇಸ್ಲಾಮ್ ಧರ್ಮದ ಸ್ಥಾಪಕರಾದ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಮಕ್ಕಾದಲ್ಲಿದ್ದಾಗ ಅಲ್ಲಿ ಘಟಾನುಘಟಿ ನೇತಾರರಿದ್ದರು. ಅವರು ಮಹೋನ್ನತ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಬಡವರ ಸಹಾಯಕ್ಕಾಗಿ ಒಂದು ಸಮಿತಿಯನ್ನು ರಚಿಸಿದ್ದರು. ಆದರೆ ಅದಾದ ನಂತರ ಅವರು ನುಬುವ್ವತ್ತಿನ ದಾವೆ ಮಾಡಿದಾಗ ಅವಿಶ್ವಾಸಿಗರ ದೊಡ್ಡ ದೊಡ್ಡ ನೇತಾರರು ಇವರ ವಿರೋಧಿಗಳಾದರು. ಆದರೂ ರಸೂಲುಲ್ಲಾಹ್(ಸ) ಅವರಿಗೆ ಎಷ್ಟರಮಟ್ಟಿಗೆ ಬಡವರೊಂದಿಗೆ ಸಹಾನುಭೂತಿ ಇತ್ತೆಂದರೆ ಮದೀನದಲ್ಲಿದ್ದರೂ ಬಡವರಿಗೆ ಹೇಗೆ ಸಹಾಯ ಮಾಡಬೇಕು. ಅವರ ಉನ್ನತಿಗಾಗಿ ಹೇಗೆ ಕೆಲಸ ಮಾಡಬೇಕು ಎಂದು ಚಿಂತಿಸಿದರು. ಅವರು ಹೇಳಿದರು ನಾನು ಬಡವರ ಹಿತಕ್ಕಾಗಿ ಒಂದು ಸಮಿತಿ ರಚಿಸಿದ್ದೆ. ಒಂದು ಒಪ್ಪಂದವಾಗಿತ್ತು ಆ ಮೂಲಕ ನಾವು ಬಡವರಿಗೆ ನೆರವು ನೀಡುತ್ತಿದ್ದೆವು. ಆ ಜನರು ನನ್ನ ವಿರೋಧಿಯಾಗಿದ್ದರು. ಸರಿ, ನುಬುವ್ವತ್ತಿನ ಸ್ಥಾನಮಾನವು ನನಗೆ ಅಲ್ಲಾಹನು ನೀಡಿರುತ್ತಾನೆ. ಅದಾಗ್ಯೂ ಮುಸಲ್ಮಾನರ ಒಂದು ದೊಡ್ಡ ಸಂಖ್ಯೆ ನನ್ನ ಜೊತೆಗಿದೆ ಮತ್ತು ಮದೀನ ಸರಕಾರದ ಒಂದು ದೊಡ್ಡ ಸಂಖ್ಯೆ ನನ್ನ ಜೊತೆಗಿದೆ. ಮತ್ತು ಮದೀನ ಸರಕಾರದ ನಾನು ಮುಖ್ಯಸ್ಥನಾಗಿದ್ದೇನೆ. ಆದರೂ ಅವರು ಕರೆದರೆ ಇಂದು ಸಹ ಮಾನವೀಯತೆಯ ಸೇವೆಗೋಸ್ಕರ ಆ ಜನರಿಗೆ ಸಹಕಾರ ನೀಡಲು ನಾನು ಸಿದ್ಧನಿದ್ದೇನೆ. ನನಗೆ ಅಧಿಕಾರ ಕೊಡುವುದು ಬೇಡ. ಒಬ್ಬ ಸದಸ್ಯನಾಗಿ ಸೇವೆಯಲ್ಲಿ ನನ್ನನ್ನು ಸೇರಿಸಿಕೊಳ್ಳಲಿ. ಸೌಜನ್ಯದ ಈ ಮಟ್ಟವಾಗಿತ್ತು. ರಸೂಲುಲ್ಲಾಹ್(ಸ) ಅವರು ಯಾವ ರೀತಿಯಲ್ಲಿ ಆ ಕ್ಷೇತ್ರದ ಜನರಲ್ಲಿ ಭ್ರಾತೃತ್ವ ಸ್ಥಾಪಿಸಿದರು. ಇತರರ ಭಾವನೆಗಳಿಗೆ ಸ್ಪಂಧಿಸಿದಾಗ ಮಾತ್ರ ನಿಜವಾದ ಭ್ರಾತೃತ್ವ ಸ್ಥಾಪನೆಗೊಳ್ಳುತ್ತದೆ. ಒಂದು ಸ್ಥಳದಲ್ಲಿ ಅವರು ಕುಳಿತುಕೊಂಡಿದ್ದರು. ಒಬ್ಬ ಬಾಲಕನ ಅರ್ಥಿ (ಜನಾಝಾ) ಅಲ್ಲಿಂದ ಹೋಗುತ್ತಿತ್ತು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಎದ್ದು ನಿಂತರು. ಅವರ ಬಳಿ ಕುಳಿತಿರುವ ಸಂಗಡಿಗರು ಹೇಳಿದರು. ಅದು ಒಂದು ಯಹೂದಿ ಬಾಲಕನ ಅರ್ಥಿ (ಜನಾಝಾ) ಆಗಿದೆ. ತಾವು ಅವರಿಗೆ ಗೌರವ ಸಲ್ಲಿಸಲು ಎದ್ದು ನಿಂತಿರಿ. ಆಗ ಅವರು ಹೇಳಿದರು. ಯಹೂದಿ ಬಾಲಕ ಮನುಷ್ಯನಲ್ಲವೇ, ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯಲು ನಾನು ನಿಂತಿರುತ್ತೇನೆ. ನಾವು ಮಾನವ ಮೌಲ್ಯಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ಲೋಕದಲ್ಲಿ ನಿಜವಾದ ಪ್ರೀತಿ ಶಾಂತಿ ಪಸರಿಸಬಹುದಾಗಿದೆ. ಶಾಂತಿ ಮೈತ್ರಿ ಮತ್ತು ಪ್ರೀತಿಯ ವಾತಾವರಣ ನಿರ್ಮಿಸಬಹುದಾಗಿದೆ. ಇದಾಗಿತ್ತು ಆ ಭಾವನೆಗಳು.

ಭ್ರಾತೃತ್ವದ (Integration) ಕುರಿತು ಬಹಳ ವಿಷಯಗಳು ಕೇಳಿಬರುತ್ತಿವೆ. ಒಳ್ಳೆಯ ವಿಷವೂ ಇದೆ. ನಾನು ಇದನ್ನೇ ಹೇಳುತ್ತಿದ್ದೇನೆ. ಈಗ ಅಹ್ಮದಿಯರು ಹೆಚ್ಚಿನ ಸಂಖ್ಯೆಯಲ್ಲಿ ವಲಸೆಗಾರರಾಗಿ ಬಂದಿರುತ್ತಾರೆ. ವಿವಿಧ ದೇಶಗಳಿಂದ ವಿಶೇಷವಾಗಿ ಪಾಕಿಸ್ತಾನದಿಂದ ವಲಸಿಗರಾಗಿ ಬಂದಿರುತ್ತಾರೆ. ಅಂತೂ Integration ಎಂದರೆ ನೀವು ಈ ನಗರದ ಒಳಿತಿಗಾಗಿ ತಮ್ಮ ಎಲ್ಲ ಸಾಮರ್ಥ್ಯಗಳನ್ನು ಉಪಯೋಗಿಸುವುದಾಗಿದೆ. ಇಲ್ಲಿ ಶಿಕ್ಷಣ ಪಡೆದು ಈ ದೇಶದ ಸೇವೆಯನ್ನು ಮಾಡಿರಿ. ಇಲ್ಲಿ ಸಮಾಜದ ಜನರ ಸೇವೆಯನ್ನು ಮಾಡಿರಿ ಮತ್ತು ಅವರ ಒಳಿತಿಗಾಗಿ ಶ್ರಮಿಸಿರಿ. ಸರಕಾರದ ಮೇಲೆ ಭಾರವಾಗುವ ಬದಲಾಗಿ ಕೌನ್ಸಿಲ್‌ನ ಮೇಲೆ ಭಾರವಾಗುವ ಬದಲಾಗಿ ಕನಿಷ್ಠ ಮಟ್ಟ ನಾವು ಅವರಿಗೆ ಯಾವ ಸಹಾಯವನ್ನು ನೀಡಬಹುದಾಗಿದೆ ಎಂಬುದು ಯೋಚಿಸಿ. ಅಹ್ಮದಿಯಾ ಜಮಾಅತಿನ ಇದೇ ಉದ್ದೇಶವಾಗಿದೆ. ಮತ್ತು ಜಮಾಅತ್ತಿನ ಸದಸ್ಯರಿಗೆ ನಾವು ಇದನ್ನೇ ಬೋಧಿಸುತ್ತೇವೆ. ನೀವು ಒಳ್ಳೆಯ ಶಿಕ್ಷಣವನ್ನು ಪಡೆದು ಈ ದೇಶದ ಸೇವೆಯನ್ನು ಮಾಡಿರಿ. ಅದರಿಂದ ನಿಮಗೆ ಮಾತ್ರ ಒಳಿತಾಗುವುದಿಲ್ಲ ದೇಶಕ್ಕೂ ಒಳಿತಾಗುತ್ತದೆ.

ಆದುದರಿಂದ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ವಿಜ್ಞಾನ ಕ್ಷೇತ್ರದಲ್ಲಿ ಮತ್ತು ಇತರ ವಿವಿಧ ವಿಷಯಗಳಲ್ಲಿ ವಿದ್ಯೆ ಪಡೆಯುತ್ತಿರುವ ನಮ್ಮ ವಿದ್ಯಾರ್ಥಿ, ವಿದ್ಯಾರ್ಥಿನಗಳಾಗಲಿ ಮುಂದುವರೆಯಬೇಕು ಮತ್ತು ದೇಶಕ್ಕೆ, ಸಮಾಜಕ್ಕೆ ಸೇವೆಗೈದು ಉತ್ತಮ ಸ್ಥಾನ ಹೊಂದುವಂತಾಗಬೇಕು. ನಿಮಗೆ ಆಶ್ರಯ ನೀಡಿದ ಈ ದೇಶದ ಉಪಕಾರ ನಿಮ್ಮ ಮೇಲಿದೆ. ನಿಮಗೆ ಎಲ್ಲಾ ರೀತಿಯ ಸ್ವಾತಂತ್ರ್ಯ ನೀಡಿದೆ. ನಿಮಗೆ ತಮ್ಮ ದೇಶದಲ್ಲಿ ಆರಾಧನೆ ಮಾಡುವ ಸ್ವಾತಂತ್ರ್ಯವಿರಲಿಲ್ಲ ಇಲ್ಲಿ ಸ್ವತಂತ್ರ್ಯವಿದೆ. ಈ ಉಪಕಾರ ಮನಗಂಡು ಪೂರ್ಣ ಪ್ರಮಾಣಿಕತೆಯಿಂದ, ನಿಮ್ಮೆಲ್ಲ ಸಾಮರ್ಥ್ಯಗಳನ್ನು ಧಾರೆ ಎರೆದಾಗ, ನಿಮ್ಮ ಶಕ್ತಿ ಮಿರಿ ಈ ದೇಶದ ಒಳಿತಿಗಾಗಿ ಸೇವೆ ಸಲ್ಲಿಸಿದಾಗ ಮಾತ್ರ ನೀವು ಋಣಮುಕ್ತರಾಗುವಿರಿ. ಇದುವೇ ನಿಜವಾದ Integration ಆಗಿರುತ್ತದೆ. ಈ ಭಾವನೆ ಹೊಂದಿರುವವರೆಗೆ ಇನ್‌ಶಾಲ್ಲಾಹ್ ಜಮಾಅತ್ತಿನ ಈ ಮಸೀದಿ ಯಾವುದೇ ಗೊಂದಲ ಅಶಾಂತಿಯ ಸ್ಥಳವಲ್ಲ. ಬದಲಾಗಿ ಈ ಮಸೀದಿ ನಿರ್ಮಾಣದ ನಂತರವೂ ಅಹ್ಮದಿಯರು ಸೇವಾ ಭಾವನೆಯಲ್ಲಿ ಇನ್ನು ಹೆಚ್ಚಿನ ಕಾಳಜಿ ವಹಿಸುವವರಾಗುವರು.

**(ಮುಂದುವರಿಯುವುದು)**

## ಝಕಾತ್ ನೀಡುವಿಕೆಯು ಒಂದು ಕಡ್ಡಾಯ ಕರ್ಮವಾಗಿದೆ

ಝಕಾತ್ ಇಸ್ಲಾಮಿನ ಐದು ಆಧಾರ ಸ್ತಂಬಗಳಲ್ಲಿ ಒಂದು ಮುಖ್ಯ ಸ್ತಂಬವಾಗಿದೆ ಮತ್ತು ನಿಗದಿತ ಪ್ರಮಾಣದಲ್ಲಿ ಅಹ್‌ಮದಿ ಮುಸಲ್ಮಾನರಿಗೆ ಇದೊಂದು ಕಡ್ಡಾಯ ಶರಯೀ ಕರ್ತವ್ಯವಾಗಿದೆ.

ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರು ಝಕಾತಿನ ಪ್ರಾಮುಖ್ಯತೆಯ ಬಗ್ಗೆ ಹೀಗೆ ಹೇಳಿದ್ದಾರೆ:

"ನಾನು ಮತ್ತೊಮ್ಮೆ ನಿಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಯಾವ ರೀತಿ ನಮ್ಮ ನಬಿ ಕರೀಮ್(ಸ) ಅವರು ಝಕಾತ್ ಒಟ್ಟುಗೂಡಿಸಿ ವಿತರಿಸುವ ನಮೂನೆಯನ್ನು ಸ್ಥಾಪಿಸಿದ್ದರೋ, ಯಾವ ರೀತಿ ಅಲ್ಲಾಹನ ಪವಿತ್ರ ಗ್ರಂಥ ಅದರ ಕ್ರಮಗಳನ್ನು ವಿವರಿಸಿತ್ತೋ, ಅದೇ ರೀತಿ ನಮ್ಮ ಜಮಾಅತ್ ಇದನ್ನು ಒಟ್ಟುಗೂಡಿಸಿ ಬಳಕೆ ಮಾಡುವುದಿಲ್ಲವೊ, ಇಸ್ಲಾಮಿನ ನಾಲ್ಕು ತತ್ವಗಳಲ್ಲಿ ಒಂದು ಅಮೋಘವಾದ ವಾಸ್ತವ ತತ್ವದ ಮೇಲೆ ನಡೆದುಕೊಂಡಂತಾಗುವುದಿಲ್ಲ. ಯಾವ ರೀತಿ ನಮಾಝ್ ಕಡ್ಡಾಯವಾಗಿದೆಯೋ ಮತ್ತು ಮಸೀದಿಯಲ್ಲಿ ಜಮಾತ್ ಸಹಿತ ನಿರ್ವಹಿಸುವುದು ಕಡ್ಡಾಯವಾಗಿದೆಯೋ ಹಾಗೆ ಝಕಾತನ್ನು ಒಟ್ಟುಗೂಡಿಸಿ ವಿತರಣೆ ಮಾಡುವುದು ಮತ್ತು ಅದರ ಬಳಕೆ ಕಡ್ಡಾಯಗೊಳಿಸಲಾಗಿದೆ. ಯಾವ ರೀತಿ ನಮಾಝ್, ಉಪವಾಸ (ರೋಝ) ಮತ್ತು ಹಜ್ಜ್ ಯಾತ್ರೆ ಪಾಲಿಸುವುದು ಅವಶ್ಯಕವೆಂದು ಭಾವಿಸುತ್ತೀರಿರೋ ಅದೇರೀತಿ ಈ ಕರ್ತವ್ಯ ಪಾಲನೆಯು ಅವಶ್ಯವೆಂದು ಪರಿಗಣಿಸಬೇಕು." **(ಮಾಲಿ ನಿಝಾಮ್, ಭಾಗ–2, ಪುಟ–30)**

ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅ.ಬಿ.ಅ) ಅವರು ನುಡಿಯುತ್ತಾರೆ:

"ಝಕಾತ್ ಪ್ರಮುಖ ಮತ್ತು ಕಡ್ಡಾಯ ಕರ್ಮ ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ. ಆದ್ದರಿಂದ ಯಾರ ಮೇಲೆ ಝಕಾತ್ ಕಡ್ಡಾಯವಾಗಿರುತ್ತದೆಯೋ ಅವರಿಗೆ ಝಕಾತ್ ನೀಡುವುದು ಅನಿವಾರ್ಯವಾಗಿದೆ ಎಂಬ ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ. ಅವರು ಅವಶ್ಯವಾಗಿ ಝಕಾತ್ ನೀಡಬೇಕು, ವಿಶೇಶವಾಗಿ ಮಹಿಳೆಯರು ಆಭರಣಗಳನ್ನು ಹೊಂದಿರುತ್ತಾರೆ. ಆ ಆಭರಣಗಳ ಝಕಾತ್ ಕೊಡುವುದು ಕಡ್ಡಾಯವಾಗಿದೆ." **(ಖುತ್‌ಬ ಜುಮುಅ 13–04–2007)**

ಭಾರತದ ಎಲ್ಲಾ ಅರ್ಹರಾದ ಪುರುಷರು ಮತ್ತು ಮಹಿಳೆಯರು ನಿಗದಿತ ಪ್ರಮಾಣದಲ್ಲಿ ಈ ಪ್ರಮುಖ ಕಡ್ಡಾಯ ಝಕಾತನ್ನು ನೀಡುವ ಕಡೆ ಗಮನ ವಹಿಸಬೇಕಾಗಿದೆ. ಅಲ್ಲಾಹನು ನಮಗೆಲ್ಲರಿಗೂ ಈ ಭಾಗ್ಯ ನೀಡುವಂತಾಗಲಿ. ಆಮೀನ್

**(ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

**Love For All, Hatred For None**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

TITLE NO: PUNKAN00001

Weekly **BADAR** Qadian

Distt: Gurdaspur (Pb.) INDIA Qadian - 143516

Vol No.1 Thursday, 30 April 2020 Issue No. 16

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 15ರ ವರದಿಯ ಉಳಿದ ಭಾಗ)**

**ನಿಕಾಹ್‌ಗಳ ಘೋಷಣೆ**

ಹುಝೂರ್ ಅನ್ವರ್ ನಿಗದಿತ ನಿಕಾಹ್‌ದ ಖುತುಬಾಗಳ ನಂತರ ಹೇಳಿದರು. ಕೆಲವು ನಿಕಾಹ್‌ಗಳ ಘೋಷಣೆ ಮಾಡುವೆನು. ಅಝೀಝು ಜ್ಜರ್‌ರೂ ಕಮಲ್ ಬಿನ್ತ್ ಮುಕರ್ರಮ್ ಅಹ್ಮದ್ ಅಸ್ಲಮ್ ಸಾಹೇಬ್ (ಬೆಲ್ಜಿಯಂ) ಅವರ ನಿಕಾಹ ಅಝೀಜ್ಜಂ ಖಾಸಿಂ ಅಬ್ಬಾಸ್ ಬಾಹುಅ ಇಬ್ನು ಮುಕರ್ರಮ್ ನದೀಮ ಅಬ್ಬಾಸ್ ಬಾಜುವಾ ಸಾಹೇಬ್ (ಬಿಲ್ಜಿಯಂ) ಅವರೊಡನೆ ನಡೆಸಲಾಯಿತು.

ಆಝೀಜ್ಜ ದಾನಿಯಾ ನಸೀರ್ ಬಿನ್ತ್ ನಜೀರ್ ಅಹ್ಮದ್ ಸಾಹೇಬ್ (ಜರ್ಮನಿ) ಅವರ ನಿಕಾಹ್ ಅಝೀಝ್ ಎಹೆತೆಶಾಮ್ ಅಹ್ಮದ್ ಇಬ್ನು ಮುಕರ್ರಮ್ ಝುಲ್ಫಿಕಾರ್ ಅಲೀ ಸಾಹೀಬ್ (ಫ್ರಾನ್ಸ್) ಅವರೊಡನೆ ನಡೆಯಿತು.

ಅಝೀಜ್ಜ ಶೆರಜ್ಜೀನ್ ಖಾಲಿಬ್ ಬಿನ್ತ್ ಮುಕರ್ರಮ್ ಖಾಲಿದ್ ಮುಸವೂದ್ ಸಾಹಿಬ್ (ಜರ್ಮನಿ) ಅವರ ನಿಕಾಹ್ ಅಝೀಜ್ಜಂ ಅನಿಲ್ ಅಹ್ಮದ್ ಅನಸ್ ಇಬ್ನು ಮುಕರ್ರಮ್ ಅನಸ್ ಅಹ್ಮದ್ ಸಾಹಿಬ್ (ಫ್ರಾನ್ಸ್) ಅವರೊಡನೆ ನಡೆಸಲಾಯಿತು.

ನಿಕಾಹಗಳ ಘೋಷಣೆಯ ನಂತರ ಹುಝೂರ್ ಅನ್ವರ್ ಹೇಳಿದರು. ದುಆ ಮಾಡೋಣ. ಅಲ್ಲಾಹನು ಈ ಸಂಬಂಧವನ್ನು ಎಲ್ಲಾ ನೆಲೆಯಲ್ಲಿ ಅನುಗ್ರಹಪೂರ್ಣಗೊಳಿಸಲಿ. ಹುಝೂರ್ ಅನ್ವರ್ ದುಆ ಮಾಡಿಸಿದ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**8 ಅಕ್ಟೋಬರ್ 2019 (ಮಂಗಳವಾರ)**

ಹುಝೂರ್ ಅನ್ವರ್ ಬೆಳಗಿನ 6.45 ಕ್ಕೆ ಮಸ್‌ಜಿದ್ ಮುಬಾರಕ್‌ಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿದರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಬೆಳಗಿನ ಜಾವ ಹುಝೂರ್ ಅನ್ವರ್ ತಮ್ಮ ಕಛೇರಿಯ ಕಾರ್ಯಗಳನ್ನು ನಿರ್ವಹಿಸತೊಡಗಿದರು.

**ಕುಟುಂಬಗಳ ಭೇಟಿ:**

ಕಾರ್ಯಕ್ರಮದನ್ವಯ 11:45ಕ್ಕೆ ಹುಝೂರ್ ಅನ್ವರ್ ಕುಟುಂಬಗಳ ಭೇಟಿಗೆ ಆಗಮಿಸಿದರು. ಪ್ರಪ್ರಥಮವಾಗಿ ಮಸೀದಿಯ ಒಂದು ಭಾಗದಲ್ಲಿ 3 ಅರಬ್ಬಿಯನ್ ಕುಟುಂಬಗಳ 26 ಜನರು ಹುಝೂರ್ ಅನ್ವರ್‌ರನ್ನು ಭೇಟಿಯಾಗುವ ಭಾಗ್ಯ ಪಡೆದರು. ಅವರಲ್ಲಿ ಒಂದು ದೊಡ್ಡ ಕುಟುಂಬದ ಮುಖಂಡರಾದ ಅಬ್ದುಲ್ ಗನ್ನಿ ಸಾಹೇಬರಾಗಿದ್ದರು. ಅವರ ಕುಟುಂಬವು ಅಲ್‌ಜಝಾಯಿರಿಗೆ ಸಂಬಂಧಿಸಿದ್ದರು. ಅಹ್ಮದಿಯತ್ತಿನ ಕಾರಣದಿಂದ ಅವರ ವಿರುದ್ಧ ಅಲ್‌ಜಝಾಯಿರ್‌ನಲ್ಲಿ ಮೊಕದ್ದಮೆಗಳನ್ನು ಹೂಡಿದ್ದರು ಮತ್ತು ಶಿಕ್ಷೆಯು ಎದುರಿಸಬೇಕಾಯಿತು. ಅವರು ಅತ್ಯಂತ ಧೈರ್ಯದಿಂದ ಈ ಮೊಕದ್ದಮೆಗಳನ್ನು ಎದುರಿಸಿದರು.

ಅವರು ಹೇಳಿದರು. ನನ್ನ ತಂದೆಯವರು ಸ್ವಪ್ನ ಕಂಡಿದ್ದರು. ಅವರು ಊರಿನಲ್ಲಿ ಒಬ್ಬಂಟಿಯಾಗಿದ್ದರು. ಅಹ್ಮದಿಯೇತರ ಕುಟುಂಬ ಸದಸ್ಯರು ಅವರನ್ನು ಬಿಟ್ಟು ಹೋಗುತ್ತಿದ್ದಾರೆ. ಅಷ್ಟರಲ್ಲಿ ಹುಝೂರ್ ಅನ್ವರ್ ಸ್ವಪ್ನದಲ್ಲಿ ಆಗಮಿಸಿ ಹೇಳುತ್ತಾರೆ ಚಿಂತಿಸಬೇಡಿರಿ. ಅಲ್ಲಾಹನು ಈ ಪರಿಸ್ಥಿತಿಗಳನ್ನು ಬದಲಾಯಿಸುವನು.

ಅಬ್ದುಲ್ ಗನ್ನಿ ಸಾಹೇಬರ ತಾಯಿ ಈ ಭೇಟಿಯ ಸಂಧರ್ಭದಲ್ಲಿ ಉಪಸ್ಥಿತಿರಿದ್ದರು. ಅವರು ಹೇಳಿದರು. ನನ್ನ ಮಕ್ಕಳು ಅಹ್ಮದಿಯರಾದ ಕಾರಣದಿಂದ ಅಲ್‌ಜಝಾಯಿರ್‌ನಲ್ಲಿ ಪೋಲೀಸ್ ಮೊಕದ್ದಮೆಯಾಗಿದೆ. ಅವರಿಗೆ 4 ವರ್ಷ ಶಿಕ್ಷೆಯಾಯಿತು. ನಾನು ಹೇಳುವುದೇನೆಂದರೆ ಅವರ ವಿಧಿಯಲ್ಲಿ ಬರೆದದ್ದು ಆಗಿಯೇ ತೀರುವುದು. ನಾನು ಹುಝೂರ್ ಅನ್ವರ್‌ರವರೊಡನೆ ದುವಾ ಮಾಡಲು ಆಪೇಕ್ಷಿಸುತ್ತೇನೆ. ಅಲಾಹನು ಅವರಿಗೆ ಜಮಾಅತಿನ ಮತ್ತು ಖಿಲಾಫತಿನ ವಿಧೇಯರಾಗಿ ಮಾಡಲಿ ಮತ್ತು ಇವರು ಖಿಲಾಫತ್‌ನೊಂದಿಗೆ ದೃಢವಾಗಿರಲಿ.

ಆಗ ಹುಝೂರ್ ಅನ್ವರ್ ಹೇಳಿದರು. ನೀವು ಚಿಂತೆ ಮಾಡಬೇಡಿರಿ. ನನಗೆ ಗೊತ್ತು ನಿಮ್ಮ ಮಕ್ಕಳು ನಿಷ್ಠಾವಂತರಾಗಿದ್ದಾರೆ. ಆಗ ಆ ಮಕ್ಕಳ ತಂದೆ ತುಂಬಾ ಸಂತುಷ್ಟರಾದರು.

ಅನಂತರ ಹುಝೂರ್ ಅನ್ವರ್ ತಮ್ಮ ಕಛೇರಿಗೆ ಆಗಮಿಸಿದರು. ಅಲ್ಲಿ ಇತರ ಕುಟುಂಬಗಳು ಹಾಗೂ ಹಲವು ಜನರು ವೈಯುಕ್ತಿಕವಾಗಿ ಹುಝೂರ್ ಅನ್ವರ್‌ರೊಡನೆ ಭೇಟಿ ಆಗುವ ಭಾಗ್ಯ ಪಡೆದರು.

ಇಂದು ಮುಂಜಾನೆ ಈ ಅಧಿವೇಶನದಲ್ಲಿ ತಮ್ಮ ಪ್ರಿಯ ಇಮಾಮರ ಭೇಟಿಯಾದವರ ಸಂಖ್ಯೆ 130 ಆಗಿತ್ತು. ಪ್ರತಿಂಯೊಬ್ಬರು ಹುರಝೂರ್ ಅನ್ವರ್‌ರೊಡನೆ ಚಿತ್ರಿ ತೆಗೆಸಿಕೊಳ್ಳುವ ಭಾಗ್ಯ ಪಡೆದರು. ಹುಝಾರ್ ಅನ್ವರ್ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿಯನ್ನು ನೀಡಿದರು ಹಾಗೂ ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕಲೇಟ್ ನೀಡಿದರು.

ಭೇಟಿಯ ಈ ಕಾರ್ಯಕ್ರಮವು ಮಧ್ಯಾಹ್ನದ 2.10 ಗಂಟೆಯವರೆಗೆ ಜಾರಿಯಲ್ಲಿತ್ತು. ಆ ನಂತರ ಹುಝೂರ್ ಅನ್ವರ್ ಮಸ್ಜಿದ್ ಮುಬಾರಕ್‌ಗೆ ಆಗಮಿಸಿ ಝುಹರ್ ಅಸರ್ ನಮಾಜ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್‌ಗಳ ನಿರ್ವಹಣೆಯ ನಂತರ ಹುಝಾರ್ ಅನ್ವರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**ಕೆಲವು ಸಮಾರಂಭಗಳ ವಿವರ:**

ಇಂದು ಹುಝೂರ್ ಅನ್ವರ್‌ರವರ ಗೌರವಾರ್ಥವಾಗಿ ಒಂದು ಪ್ರಮುಖ ಸಮಾರಂಭ UNO ದ ಒಂದು ಸಂಸ್ಥೆಯಾದ UNESCO ಮುಖ್ಯ ಕಛೇರಿಯ ಕಟ್ಟಡದ ಒಂದು ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಮಾಲಿ ದೇಶದ ರಾಯಭಾರಿಯ ಪರವಾಗಿ UNESCO ವತಿಯಿಂದ ಈ ಸಮಾರಂಭದ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಅದರ ಮುಂಚಿತವಾಗಿ ರಾಷ್ಟ್ರಮಟ್ಟದಲ್ಲಿ ಬ್ರಿಟೀಷ್ ಪಾರ್ಲಿಮೆಂಟ್, ಕ್ಯಾಪಿಟಲ್ ಹಿಲ್, ನ್ಯೂಜಿಲ್ಯಾಂಡ್ ಪಾರ್ಲಿಮೆಂಟ್ ಹಾಗೂ ಡಚ್ಚ್ ಪಾರ್ಲಿಮೆಂಟ್‌ಗಳಲ್ಲಿ ಸಮಾರಂಭಗಳು ಏರ್ಪಡಿಸಲಾಗಿದ್ದವು ಮತ್ತು ಹುಝೂರ್ ಅನ್ವರ್ ಅಲ್ಲಿ ತಮ್ಮ ಭಾಷಣವನ್ನು ನೀಡಿದ್ದರು.

ಇಂದಿನ ದಿನವು ಒಂದು ಐತಿಹಾಸಿಕ ದಿನವಾಗಿದೆ. ಇದು ಯಾವುದೇ ಒಂದು ದೇಶದ ಪಾರ್ಲಿಮೆಂಟ್ ಅಥವಾ ಸಂಸ್ಥೆ ಅಲ್ಲ. ಬದಲಾಗಿ ಜಾಗತಿಕ ಮಟ್ಟದ ಒಂದು ಜಾಗತಿಕ ಸಂಸ್ಥೆ UNESCO ಅದು ಲೋಕದ ಎಲ್ಲಾ ದೇಶಗಳನ್ನು ಪ್ರತಿನಧಿಸುತ್ತಿದೆ. ಹುಝೂರ್ ಅನ್ವರ್‌ರವರ ಗೌರವದಲ್ಲಿ ಒಂದು ಸಮೂಹವನ್ನು ಏರ್ಪಡಿಸಿದ್ದೆವು.

ಖಲಿಫತುಲ್ ಮಸೀಹ್‌ರವರು ಲೋಕದ ಯಾವುದೇ ಜಾಗತಿಕ ಸಂಸ್ಥೆಯ ಒಳಗೆ ಸಂಭೋಧಿಸುತ್ತಿರುವ ಮೊದಲನೆಯ ಸಮಾರಂಭವಾಗಿತ್ತು. ಇನ್‌ಶಾ ಅಲ್ಲಾಹ್ ಇಲ್ಲಿಂದ ಮುಂದೆ ಜಮಾಅತಿನ ಮಹೋನ್ನತ ಯಶಸ್ಸುಗಳು, ಕ್ರಾಂತಿಗಳು, ಹಾಗೂ ವಿಜಯಗಳ ಬಾಗಿಲುಗಳು ತೆರೆಯಲ್ಪಡುವುವು.

ಕಾರ್ಯಕ್ರಮದನ್ವಯ 3:30ಕ್ಕೆ ಹುಝೂರ್ ಅನ್ವರ್ ಮಿಷನ್ ಹೌಸ್ ದಾರುಸ್ಸಲಾಮ್‌ದಿಂದ ಈ ಸಮಾರಂಭಕ್ಕಾಗಿ ತೆರಳಿದರು.

UNESCO ಕಟ್ಟಡವು ಪ್ಯಾರೀಸ್ ನಗರದ ಮಧ್ಯದಲ್ಲಿದೆ. ಈ ಕಟ್ಟಡದ ಸಮೀಪವೇ ಪುಲ್‌ಮ್ಯಾನ್ ಹೋಟೆಲ್‌ನಲ್ಲಿ ಕೆಲ ಸಮಯಕ್ಕಾಗಿ ನಿಲ್ಲಲು ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಕೆಲವು ಅತಿಥಿಗಳೊಡನೆ ಹುಝೂರ್ ಅನ್ವರ್ ಭೇಟಿಯಾಗುವ ಕಾರ್ಯಕ್ರಮವಿತ್ತು. 4:15 ಕ್ಕೆ ಹುಝೂರ್ ಅನ್ವರ್ ಪುಲ್‌ಮ್ಯಾನ್ ಹೋಟೆಲ್‌ಗೆ ಆಗಮಿಸಿದರು.

**ಫ್ರೆಂಚ್ ಮುಸ್ಲಿಂ ಕೌನ್ಸಿಲ್ ವೈಸ್‌ಪ್ರೆಸಿಡೆಂಟರ ಹುಝೂರ್ ಅನ್ವರ್‌ರೊಡನೆ ಭೇಟಿ:**

4:30 ಗಂಟೆಗೆ ಫ್ರೆಂಚ್ ಮುಸ್ಲಿಂ ಕೌನ್ಸಿಲ್‌ನ ವೈಸ್ ಪ್ರೆಸಿಡೆಂಟ್ Mr. Anouar Kbibech ಅವರು ಹುಝೂರ್ ಅನ್ವರ್‌ರೊಡನೆ ಭೇಟಿ ಆಗುವ ಭಾಗ್ಯ ಪಡೆದರು ಅವರು ಫ್ರೆಂಚ್ ಮುಸ್ಲಿಂ ವ್ಯಕ್ತಿ ಆದ್ದಾರೆ. ಹಾಗೂ ಮರಾಶಿನ್

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
NATIONAL TOLL FREE
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.